ಶ್ರೀ ವಾಟಾಳ್ ನಾಗರಾಜ್ : ಎಲ್ಲರೂ ಮಾತನಾಡುವುದಕ್ಕೆ ಯಾವುದಾದರೂ ಒಂದು ಉದ್ದೇಶ ಇರುತ್ತದೆ. ಜನರಿಗೆ ಒಳ್ಳೆಯದಾಗಬೇಕು. ಆ ಒಳ್ಳೆಯದು ಮಾಡತಕ್ಕಂಥದ್ದರ ಬಗ್ಗೆ ಇರಬೇಕು. ಜನರು ಮಾತನಾಡುವ ಈ ಉದ್ದೇಶ ತಮಗೆ ಹೇಳುತ್ತಿದ್ದೇನೆ. ತಾವು ಮಾಡುತ್ತೀರಿ ಎನ್ನತಕ್ಕಂತಹ ಭರವಸೆ ನನಗೆ ಇದೆ. ನಿಮ್ಮ ಅಧಿಕಾರಿಗಳ ಬಗ್ಗೆ ಬಹಳ ಗೌರವ ಇದೆ. ಗೋವಿಂದರಾಜ್ ಮತ್ತು ರೆಡ್ಡಿಯವರು ಬಹಳ ಪ್ರಯತ್ನ ಪಟ್ಟರು. ಇವರೆಲ್ಲಾ ಪ್ರಯತ್ನ ಪಟ್ಟಿದ್ದಾರೆ. ನಾನು ಎಲ್ಲರಿಗೂ ಅಭಿನಂದಿಸುತ್ತೇನೆ. ನೀವು ದಯವಿಟ್ಟು ನನಗೆ ಕರಾರುವಕ್ಕಾಗಿ ಹೇಳಿ ಯಾವುದು ಏನಾದರೂ ಆಗಲಿ, ನೀವು ಚಾಮರಾಜನಗಕ್ಕೆ ಲಿತಿ ಶೀಫ್ರ ಅಂದರೆ 1998ರ ಕೊನೆ ಅಥವಾ 1999ರ ಮೊದಲು ನೀರು ಕೊಡಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ : ಬೈ ಮಿಡ್ಲ್ ಆಫ್ 1999ನಲ್ಲಿ ಕುಡಿಯುವ ನೀರು ಅವರಿಗೆ ಕೊಡುವ ಕೆಲಸ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : 1990ನೇ ಇಸವಿಯಲ್ಲಿ ಆರಂಭ ಆದ ಶಿವಮೊಗ್ಗ ಕುಡಿಯುವ ನೀರಿನ ಯೋಜನೆಗೆ ಸನ್ಮಾನ್ಯ ಬಚ್ಚೇಗೌಡರ ಕಾಲದಲ್ಲಿ, ಜೆ.ಹೆಚ್. ಪಟೇಲರು ಬಂದ ಕಾಲದಲ್ಲಿ ಕ್ಯಾಬಿನೆಟ್ ಅಪ್ರೂವಲ್ ಮಾಡಿಕೊಟ್ಟಿದ್ದಾರೆ. ನಿಜಕ್ಕೂ ಈ ಸರ್ಕಾರಕ್ಕೆ ಶಿವಮೊಗ್ಗ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಈಶ್ವರಪ್ಪನವರ ಪ್ರಶ್ನೆಗೆ ಉತ್ತರ ಹೇಳುತ್ತೇನೆ ಅವರೂ ಎಸ್ಕಲೇಷನ್ ಮೊನ್ನೆ ಕೇಳಿದ್ದಾರೆ, ಅದಕ್ಕೆ 46,40,000 ರೂ.ಗಳು ಮಂಜೂರು ಆಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ಯೋಜನೆ ಇದ್ದದ್ದು 12 ಕೋಟಿ ರೂಪಾಯಿ ಮಾತ್ರ ಅದನ್ನು ಯಾವಾಗ ಮಾಡುತ್ತೀರಿ, ಯಾವಾಗ ಮುಗಿಸುತ್ತೀರಿ.

ಶ್ರೀ ಕೆ.ಎನ್. ನಾಗೇಗೌಡ : ನಿಯಮ 69ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದಾರೆ. ಇದು ಅಜೆಂಡಾದಲ್ಲಿ ಇದೆ.

(ಗೊಂದಲ)

ಉಪ-ಸಭಾಧ್ಯಕ್ಷರು : ವಿಷಯ ಪಟ್ಟಿ ಪ್ರಕಾರ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ ಮೇಲೆ ತಮ್ಮ ವಿಷಯ ಬರುತ್ತದೆ. ತಾವು ದಯಮಾಡಿ ಕುಳಿತುಕೊಳ್ಳಿ. ಶಿವರಾಮೇಗೌಡರು ಮಾತನಾಡಿದ ಮೇಲೆ ತಮ್ಮ ವಿಷಯ ಬರುತ್ತದೆ.

ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಭಾಷಣ

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಉಪ ಸಭಾಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ಬೆಂಬಲಿಸಿ ನನ್ನ ಸಲಹೆಗಳನ್ನು ಸರ್ಕಾರಕ್ಕೆ ಕೊಡಲು ಇಚ್ಛೆ ಪಡುತ್ತೇನೆ. ಕಳೆದ 28 ತಿಂಗಳಿನಿಂದ ಸರ್ಕಾರ ನಡೆಸಿದ ಮೇಲೆ ಜನ ಈ ಸರ್ಕಾರ ಸರಿಯಾಗಿ ನಡೆಯುತ್ತಿದೆ ಎಂದು

ತೀರ್ಮಾನ ತೆಗೆದುಕೊಂಡು ಕಳೆದ ಲೋಕಸಭಾ ಚುನಾವಣೆಯಲ್ಲಿ ಹಿಂದೆ ಎಂದೂ ಕೊಡದೆ ಇರತಕ್ಕಂತಹ ಬಹುಮತವನ್ನು ಈ ಪಕ್ಷಕ್ಕೆ ಕೊಟ್ಟು, ಇವತ್ತು ದೆಹಲಿಗೆ ನಮ್ಮ ನಾಯಕರನ್ನು ಕಳುಹಿಸಿಕೊಟ್ಟಿರತಕ್ಕಂತಹ ಸಂದರ್ಭದಲ್ಲಿ, ಇದಾದಮೇಲೆ ಎರಡು ಉಪ ಚುನಾವಣೆಗಳು ನಡೆದಿರತಕ್ಕಂಥದ್ದು ನಮ್ಮ ಸರ್ಕಾರಕ್ಕೆ ಎಚ್ಚರಿಕೆ ಘಂಟೆ ಎಂದು ನಾನು ಈ ಸರ್ಕಾರಕ್ಕೆ ಹೇಳುತ್ತಾ, ಇವತ್ತು ಏನಾಗಿದೆ ಎಂದರೆ, ರಾಮನಗರ ಉಪ ಚುನಾವಣೆ ಮುಗಿದ ಮೇಲೆ ಎರಡು ಉಪ ಚುನಾವಣೆ ನಡೆಯಿತು, ಒಂದು ಚಿಕ್ಕನಾಯಕನ ಹಳ್ಳಿ, ಒಂದು ರಾಮನಗರ. ರಾಮನಗರ ಚುನಾವಣೆಯಲ್ಲಿ ನಾವೂ ಕಲಿತುಕೊಳ್ಳಬೇಕಾಗಿದ್ದು ಇದೆ, ಅವರು ಕಲಿತುಕೊಳ್ಳಬೇಕಾಗಿದ್ದು ಇದೆ. ಅದು ಬೇರೆ ವಿಚಾರ. ಅಲ್ಲಿ ಸ್ಥಳೀಯವಾದ ಅಭ್ಯರ್ಥಿ ಎಂದು ಜನ ಚುನಾಯಿಸಿದ್ದಾರೆ. ಅದರಲ್ಲಿ ಅಭ್ಯಂತರವಿಲ್ಲ. ಆದರೆ ಬಹಳ ಬೆನ್ನು ತಟ್ಟಿಕೊಂಡು ಒಂದು ಪಕ್ಷದವರಿಗೆ ರೆಕ್ಕೆ ಪುಕ್ಕ ಬಂದ ಹಾಗೆ ಹಾಗಿದೆ. ಆದರೆ, ಚಿಕ್ಕನಾಯಕನ ಹಳ್ಳಿಯಲ್ಲಿ ಕಳೆದ ಸಾರಿ ಎರಡನೇ ಸ್ಥಾನದಲ್ಲಿ ಇದ್ದವರು, ಹೋದ ಸಾರಿ ಅಲ್ಲಿ ಕೆ.ಸಿ.ಪಿ. ಅಭ್ಯರ್ಥಿ ಅಲ್ಲಿ ಗೆದ್ದಿದ್ದು. ಈ ಸಾರಿ ಕೆ.ಸಿ.ಪಿ ಇವರು ಇಬ್ಬರೂ ಒಂದಾಗಿ ವಿರೋಧ ಪಕ್ಷದ ನಾಯಕರ ಪಟ್ಟ ಬಂದಿದ್ದರೂ ಸಹಿತ ಅಲ್ಲಿ ಕೆಸಿಪಿ ಕಾಂಗ್ರೆಸ್ ಇಬ್ಬರೂ ಸೇರಿ ಮೂರನೇ ಸ್ಥಾನಕ್ಕೆ ಹೋಗಿದ್ದಾರೆ. ಆದ್ದರಿಂದ ಇವತ್ತು ಜನ ಏನು ತೀರ್ಮಾನ ಮಾಡುತ್ತಿದ್ದಾರೆ ಎಂದರೆ, ನೀವೇನು ಶಹಭಾಸಗಿರಿ ಕೊಟ್ಟು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ ಎಂದು ಹೇಳುತ್ತಿಲ್ಲ. ನೀವೂ ಕಲಿತುಕೊಳ್ಳಬೇಕಾದ್ದು ಇದೆ, ನೀವು ಕಲಿತುಕೊಳ್ಳಬೇಕಾದದ್ದು ಇದೆ ಎಂದು ಎಚ್ಚರಿಕೆ ಘಂಟೆ ಕೊಟ್ಟಿರತಕ್ಕಂಥದ್ದು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿ, ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು 27 ತಿಂಗಳು ನಡೆದ ಸರ್ಕಾರ ಜೆ.ಹೆಚ್. ಪಟೇಲರ ನೇತೃತ್ವದ ಸರ್ಕಾರ, ದೇವೇಗೌಡರ ನೇತೃತ್ವದ ಸರ್ಕಾರ, ಆರೋಪ ರಹಿತವಾಗಿರತಕ್ಕಂತಹ ಸರ್ಕಾರ ಈ ಒಂದು ಜನತೆಗೆ ಸರಿಯಾಗಿ ಆಡಳಿತ ನಡೆಸುತ್ತಿದೆ, ಒಂದು ಮಾತು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಕಳೆದ ಐದು ವರ್ಷದ ಅವಧಿಯಲ್ಲಿ ನಾವು ಲೆಕ್ಕ ಹಾಕಿದಾಗ ಎರಡು ವರ್ಷ ಆಡಳಿತ ನಡೆಸಿದ ಸರ್ಕಾರ ಅವರದೇ ಪಕ್ಷದವರದ್ದು ಆ ಸರ್ಕಾರ ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿ, ನಾಯಕತ್ವವನ್ನು ಬದಲು ಮಾಡಿದ ಮುಖಂಡರು ಸಹಿತ ಈ ಸದನದಲ್ಲಿದ್ದಾರೆ. ಮತ್ತೊಂದು ಎರಡು ವರ್ಷ ನಡೆದ ನಾಯಕತ್ವದಲ್ಲಿ 177 ಜನಸಂಖ್ಯೆ ಇದ್ದುದು 39ಕ್ಕೆ ತರತಕ್ಕಂತಹ ಮಟ್ಟಕ್ಕೆ ಆಡಳಿತ ನೆಡಸಿದ್ದೂ ನಾವು ನೋಡಿದ್ದೇವೆ. ನಾವು ಏತಕ್ಕೆ ಇದನ್ನು ಹೇಳುತ್ತಿದ್ದೇವೆ ಎಂದರೆ, ಅಧಿಕಾರ ನಡೆಸತಕ್ಕಂತಹ ಸಂದರ್ಭದಲ್ಲೂ ನೀವು ಸಹಿತ ಸರಿಯಾಗಿ ನಡೆಸದೇ ಇದ್ದರೆ, ಇವರಿಗೆ ಆದ ಗತಿ ನಿಮಗೆ ಆಗುವುದು ಬೇಡ, ಸರಿಯಾಗಿ ಇರಿ ಎನ್ನತಕ್ಕಂಥದ್ದರ ಬಗ್ಗೆ ನಾನು ನಮ್ಮ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಮೊನ್ನೆ ಬಹಳ ಹೇಳಿದರು, ರಾಮನಗರದಲ್ಲಿ ಗೋಲಿಬಾರ್ ಆಯಿತು, ರಾಮನಗರದಲ್ಲಿ ಕತ್ತೆಗಳೂ ಕುಡಿದವು, ನಾಯಿಗಳೂ ಕುಡಿದವು ಎಂದು ಹೇಳಿದರು. ಉಪ ಚುನಾವಣೆಯಲ್ಲಿ ನಾನು ಆ ಸ್ಥಳದಲ್ಲಿ ಇದ್ದವನು, ರಾಮನಗರ ಉಪ ಚುನಾವಣೆಯಲ್ಲಿ ಏನಾಯಿತು ಎಂದು ಹೇಳತೀರದು. ಅವರದೇ ಪಕ್ಷದ ವ್ಯಾನ್ ಸಿಕ್ಕಿದರೂ ಸಹಿತ, ಇವರ ಪಾರ್ಟಿದು ಎಂದು ಹೇಳಿ ಹೆಸರು ಕಟ್ಟುತ್ತಿದ್ದರು. ಆದ್ದರಿಂದ ಒಂದೇ ಪಕ್ಷದವರೂ ಕುಡಿಸಲಿಲ್ಲ, ಎಲ್ಲಾ ಪಕ್ಷದವರೂ ಸೇರಿ ಕುಡಿಸತಕ್ಕಂತಹ ಪ್ರಯತ್ನ ಮಾಡಿದರು ಎಂದು

ನಾನು ಈ ಸಂದರ್ಭದಲ್ಲಿ ಸದನದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಎಲ್ಲರೂ ಸಹಿತ ಸರ್ಕಾರ ನಡೆಸುವಾ ಎಚ್ಚರ ವಹಿಸಬೇಕೆಂದು ನನ್ನ ಒಟ್ಟಾರೆ ಅಭಿಪ್ರಾಯ.

6.30 ಪಿ.ಎಂ.

ಈಗ ನಮ್ಮಲ್ಲಿ ಜಿಲ್ಲಾ ಮಂತ್ರಿಗಳು ಇದ್ದಾರೆ. ಆದರೆ ಯಾವುದೇ ಕಾನೂನಿನ ಚೌಕಟ್ಟಿನಲ್ಲಿ ಅಥವಾ ಯಾವುದೇ ರಾಜ್ಯಾಂಗದ ಅಡಿಯಲ್ಲಿ ಇವೊತ್ತು ಜಿಲ್ಲಾ ಮಂತ್ರಿಗಳನ್ನು ನೇಮಕ ಮಾಡತಕ್ಕಂಥ ಅವಕಾಶ ಇಲ್ಲ. ಯಾವಾಗ ಇವೊತ್ತು ಜಿಲ್ಲಾಪರಿಷತ್ ಅಸ್ತಿತ್ವದಲ್ಲಿದೆ, ತಾಲ್ಲೂಕು ಪಂಚಾಯತ್ ಅಸ್ತಿತ್ವದಲ್ಲಿದೆ, ಗ್ರಾಮ ಪಂಚಾಯ್ತಿ ಅಸ್ತಿತ್ವದಲ್ಲಿದೆ, ಶಾಸಕರು ಇದ್ದಾರೆ, ಲೋಕಸಭಾ ಸದಸ್ಯರು ಇದ್ದಾರೆ, ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಇದ್ದಾರೆ, ಜಿಲ್ಲಾ ಅಧ್ಯಕ್ಷರು ಏನು ಮಾಡುತ್ತಿದ್ದಾರೆ? ಜಿಲ್ಲಾ ಅಧ್ಯಕ್ಷರ ಅವಶ್ಯಕತೆ ಇದೆಯೋ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ಇವೊತ್ತು ಜಿಲ್ಲಾ ಮಂತ್ರಿಗಳು ಎಂದು ಏನು ಮಾಡಿದ್ದಾರೋ ಅದು ಹೇಗೆ ಆಗುತ್ತದೆ ಎಂದರೆ ಒಂದು ಮನೆಯಲ್ಲಿ ಎರಡು ಹೆಂಗಸರು ಆಗಿಬಿಟ್ಟರೆ ಆಕೆನೂ ಉಪ್ಪು ಹಾಕುವುದು, ಈಕೆನೂ ಉಪ್ಪು ಹಾಕುವುದು, ಅಥವಾ ಇನ್ನೇನಾದರೂ ಹಾಕಿ ಆ ಸಾರನ್ನು ಕೆಡಿಸತಕ್ಕಂಥ ವ್ಯವಸ್ಥೆ ಮಾಡುತ್ತಾರಲ್ಲ ಆ ರೀತಿ ಇವೊತ್ತು ಜಿಲ್ಲೆಯಲ್ಲಿ ಆಡಳಿತ ಕೆಡಿಸತಕ್ಕಂಥ ರೀತಿಯಲ್ಲಿ ಇವೊತ್ತು ಜಿಲ್ಲಾ ಮಂತ್ರಿಗಳು ಕೈ ಹಾಕುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾನೊಂದು ವಿನಂತಿಯನ್ನು ಮಾಡುತ್ತೇನೆ. ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ತೆಗೆಯಿರಿ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಅಗತ್ಯವಿಲ್ಲ. ಒಂದು ವೇಳೆ ನೀವು ತೆಗೆಯುವುದಕ್ಕೆ ಆಗುವುದಿಲ್ಲ ಎಂದರೆ ನೀವು ಪೂರ್ವಾಗ್ರಹ ಪೀಡಿತರಾಗದೇ ಇರತಕ್ಕಂಥ ಬೇರೆ ಜಿಲ್ಲೆಯ ಮಂತ್ರಿಗಳನ್ನು ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನಾಗಿ ಮಾಡಿದರೆ ಆಗುತ್ತದೆ. ಇಲ್ಲದೇಹೋದರೆ ತೊಂದರೆಯಾಗುತ್ತದೆ. ಉದಾಹರಣೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಎಲ್ಲರನ್ನೂ ಅಂದರೆ ಜಿಲ್ಲಾಪರಿಷತ್ ಅಧ್ಯಕ್ಷರನ್ನು, ಜಿಲ್ಲಾ ಪಂಚಾಯತ್ ಅಧ್ಯಕ್ಷರನ್ನು ತಾಲ್ಲೂಕು ಪಂಚಾಯತ್ ಅಧ್ಯಕ್ಷರನ್ನು ಮತ್ತು ಗ್ರಾಮಪಂಚಾಯತ್ ಅಧ್ಯಕ್ಷರನ್ನು, ಶಾಸಕರುಗಳನ್ನು ಹಾಗೂ ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಒಗ್ಗಟ್ಟಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡತಕ್ಕಂಥದ್ದು. ಅಭಿವೃದ್ಧಿಯನ್ನು ಮಾಡಬೇಕು ಎನ್ನುವ ದೃಷ್ಟಿಕೋನವನ್ನು ಹೊಂದಿದಂಥ ಕೆಲವು ಹಿರಿಯ ಮಂತ್ರಿಗಳೂ ಕೂಡ ಇದ್ದಾರೆ. ಅವರದ್ದೂ ಕೂಡ ಒಂದು ವರ್ಗ ಇದೆ. ಆದಕಾರಣ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಯಾರು ತೊಂದರೆಯನ್ನುಂಟು ಮಾಡುತ್ತಾರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಅವರ ಬಗ್ಗೆ ಸೂಕ್ತವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಆದ್ದರಿಂದ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಅಗತ್ಯ ಇಲ್ಲ. ಇದರಿಂದ ಅಧಿಕಾರಿಗಳು ಕೂಡ ಗೊಂದಲದಲ್ಲಿ ಸಿಕ್ಕಿದ್ದಾರೆ. ಒಬ್ಬ ಬಿ.ಡಿ.ಓ ಅಥವಾ ಒಬ್ಬ ಜಿಲ್ಲಾ ಅಧಿಕಾರಿ ಶಾಸಕರ ಮಾತನ್ನು ಕೇಳಬೇಕೋ ಅಥವಾ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಮಾತನ್ನು ಕೇಳಬೇಕೋ ಎಂದು ಗೊಂದಲದಲ್ಲಿ ಸಿಕ್ಕಿದ್ದಾರೆ. ಆದಕಾರಣ ಸನ್ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ತಾವು ಜಿಲ್ಲಾ ಮಂತ್ರಿಗಳ ಅವಶ್ಯಕತೆ ಇಲ್ಲ ಆದಕಾರಣ ಅವರನ್ನು ತೆಗೆಯಬೇಕೆಂದು ಸರ್ಕಾರಕ್ಕೆ ನಿರ್ದೇಶನ ನೀಡಬೇಕು. ಒಂದು ವೇಳೆ ತೆಗೆಯುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ವಾದ ಇದ್ದರೆ ನೀವು

ಉಸ್ತುವಾರಿ ಜಿಲ್ಲಾ ಮಂತ್ರಿಗಳನ್ನಾಗಿ ಪೂರ್ವಾಗ್ರಹ ಪೀಡಿತರಲ್ಲದೇ ಇರತಕ್ಕಂಥ ಬೇರೆಯವರನ್ನ ನೇಮಕ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ನನ್ನ ಒಟ್ಟಾರೆ ಸಾರಾಂ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಯಾವುದಾದರೂ ಜಿಲ್ಲೆ ಇದ್ದರೆ ಉದಾಹರಣೆಯಾಗಿ ಹೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಸನ್ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದುದು ನಿಜ ಅಂತಹವರು ಬಹಳ ಜನ ಇದ್ದಾರೆ. ಆದರೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದ ನಾನು ಅವರಿಗೆ ವರದಿ ಕೊಡುತ್ತೇನೆ. ಇವೊತ್ತು ಒಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮಲ್ಲಿ 4 ಜನ ಮಂತ್ರಿಗಳು ಇದ್ದಾರೆ. ಅದರಲ್ಲಿ ಬಹಳ ಒಳ್ಳೆಯ ಕೆಲಸ ಮಾಡತಕ್ಕಂಥ ಮಂತ್ರಿಗಳ ಒಂದು ವರ್ಗ ಕೂಡ ಇದೆ.

ಶ್ರೀ ಬಿ. ಶಿವರಾಮು : ಮಾನ್ಯ ಶಿವರಾಮೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾ ಉಸ್ತುವಾರಿ ಮಂತ್ರಿಗಳನ್ನು ತೆಗೆಯಬೇಕು ಎಂದು ಹೇಳುತ್ತಿದ್ದಾರೆ. ಆದರೆ ಅವರು ಇಡೀ ರಾಜ್ಯ ಅನ್ವಯಿಸುವ ಹಾಗೆ ಹೇಳುತ್ತಿದ್ದಾರೋ ಅಥವಾ ಮಂಡ್ಯಕ್ಕೋ, ಹಾಸನಕ್ಕೋ ಸೀಮಿತವಾ ಹೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ, ಆದಕಾರಣ ಅದರ ಬಗ್ಗೆ ವಿಶ್ಲೇಷಣೆ ಆಗಲಿ. ನಾನು ಈಗಾಗಲೆ ಇದನ್ನು ಒತ್ತಾಯ ಮಾಡಿದ್ದೇವೆ. ಆದರೆ ತಮ್ಮದು ಯಾವ ರೀತಿ ಇದೆ ಎಂಬುದು ನಮಗೆ ಗೊತ್ತಾಗಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ಹಾಸನಕ್ಕೋ, ಮಂಡ್ಯಕ್ಕೋ ಸೀಮಿತವಾ ಹೇಳುತ್ತಿಲ್ಲ. ನಾನು ಜನರಲ್ಲಾಗಿ ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯಾಗಬೇಕೆಂದು ಹೇಳುತ್ತಿದ್ದೇನೆ ಇವೊತ್ತು 45 ಜನಗಳ ಮಂತ್ರಿಮಂಡಲ ಇದೆ. ಒಂದು ಕಡೆ ಚೆನ್ನಾಗಿ ಕೆಲಸ ಮಾಡತಕ್ಕಂಥ ಮಂತ್ರಿಗಳ ವರ್ಗ ಇದೆ. ಇನ್ನು ಅಲಕ್ಷ ಮಂತ್ರಿಗಳೂ ಕೂಡ ಕೆಲವರು ಇದ್ದಾರೆ. ನಾವು ಸಪೋರ್ಟ ಕೊಟ್ಟಿದಾ ಅವರೆಲ್ಲಾ ಮಂತ್ರಿಗಳು ಆಗಿದ್ದಾರೆ. ಇವೊತ್ತು ನೀವು ಇರತಕ್ಕಂಥ ಅಲಕ್ಷ ಮಂತ್ರಿಗಳನ್ನು ತೆಗೆಯದೆ ಇದ್ದರೆ ಈಗಾಗಲೇ ಏನು ಎಚ್ಚರಿಕೆ ಘಂಟೆಯಾಗಿದೆ, ನಾನು ಆಗಲೇ ಹೇಳಿದ ಹಾಗೆ ಎರಡು ಉಪ ಚುನಾವಣೆಯಲ್ಲಿ, ಮುಂದಿನ ಚುನಾವಣೆಗೂ ಕೂಡ ನಿಮಗೆ ಹೊಡೆತ ತಪ್ಪಿದ್ದಲ್ಲ, ಆದಕಾರಣ ಸರ್ಕಾರ ಎಚ್ಚರವಹಿಸಬೇಕು. ಇಲ್ಲಿ ಕೆಲವು ಹಿರಿಯ ಮಂತ್ರಿಗಳೂ ಕೂಡ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಿಪ್ಪಗೊಂಡನ ಹಳ್ಳಿಯಲ್ಲಿ ಒಂದು ಸಭೆ ಕರೆದು ಯಾರು ಅಲಕ್ಷ ಮಂತ್ರಿಗಳ ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಂತ್ರಿಗಿರಿ ಉಪಯೋಗಿಸಿಕೊಂಡ ಏನು ಕೆಲಸ ಮಾಡಬೇಕು ಎನ್ನುವುದು ಕೆಲವರಿಗೆ ಗೊತ್ತಿಲ್ಲದೇ ಇರತಕ್ಕಂಥ ಮಂತ್ರಿಗಳು ಯಾರ ಇದ್ದಾರೆ ಅವರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನನ್ನ ಒಟ್ಟಾರೆ ಒತ್ತಾಯ

ಶ್ರೀ ಹೆಚ್. ಶಿವಪ್ಪ : ದಕ್ಷತೆಯನ್ನು ಅಳೆಯತಕ್ಕಂಥ ಪ್ಯಾರಾ ಮೀಟರ ಏನು ಎಂದು ಹೇಳಿದರೆ ಅದನ್ನು ಮಾಡಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಆ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು, ಇಲ್ಲದೇಹೋದರೆ ಬೈರೇಗೌಡರಂಥವರು, ಗೋವಿಂದೇಗೌಡರಂಥವರು, ನಾಗೇಗೌಡರಂಥವರು, ಪಾಟೀಲರಂಥವರು ತೆಗೆದುಕೊಳ್ಳಬೇಕು. ಹಿರಿಯ ಮಂತ್ರಿಗಳು ಯಾರು ಇದ್ದಾರೆ ಅವರು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್, ದಕ್ಷತೆ ಇರುವಂಥ ಮಂತ್ರಿಗಳು ಸಹಿತ ಇದ್ದಾರೆ ಎಂದು ಹೇಳಿದ್ದಾರೆ. ಅಂದರೆ ಅಧ್ಯಕ್ಷರು ಯಾರು ಎಂದೂ ಕೂಡ ಹೇಳಬೇಕಾಗುತ್ತದೆ. ಸುಮ್ಮನೆ ಎಲ್ಲರನ್ನೂ ಸೇರಿಸಿ ದಕ್ಷರು, ಅದಕ್ಷರು ಎಂದು ಹೇಳಿಬಿಟ್ಟರೆ?

ಶ್ರೀ ಎಲ್.ಆರ್. ಶಿವರಾಮೇಗೌಡ : ಬಹಳಷ್ಟು ಮಂತ್ರಿಗಳು ಹಿರಿಯ ಮಂತ್ರಿಗಳು ಇದ್ದಾರೆಂದು ಮೊದಲೇ ಹೇಳಿದ್ದೇನೆ. ಅದನ್ನು ತಿಪ್ಪಗೊಂಡನಹಳ್ಳಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದು ಅಲ್ಲಿ ಅವರು ಗುರುತರವಾಗಿ ನಿಮ್ಮ ಇಲಾಖೆಯಲ್ಲಿ ಕೆಲಸ ಚೆನ್ನಾಗಿ ಆಗುತ್ತಿಲ್ಲ. ನೀವು ಎಚ್ಚೆತ್ತುಕೊಳ್ಳಬೇಕು ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಅದನ್ನು ಮುಖ್ಯಮಂತ್ರಿಗಳೇ ತೀರ್ಮಾನ ತೆಗೆದುಕೊಳ್ಳಬೇಕು ಹೊರತು ನೀವು ನಾವು ಅಲ್ಲ, ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಸ್ಪಷ್ಟ ಮಾಡುತ್ತೇನೆ. ಇನ್ನು ನಿಗಮ ಮತ್ತು ಮಂಡಲಿಗಳು, ಈ ನಿಗಮ ಮಂಡಲಿಗಳು ಯಾವ ಸರ್ಕಾರ ಎಂದರೂ ಸಹಿತ ಈ ನಿಗಮ ಮಂಡಳಿಗಳ ಮೂರು ವರ್ಷ ಮುಗಿಸಿಬಿಡುತ್ತಾರೆ. ಇವೊತ್ತು ಈ ನಿಗಮ ಮಂಡಳಿಗಳು ಏನಾಗಿವೆ? ಇವೊತ್ತು ನಿಗಮ ಮಂಡಲಿಗಳು ಯಾವುವು? ಉದಾಹರಣೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕೆ.ಎಸ್.ಆರ್.ಟಿ.ಸಿ, ಫುಡ್ ಆಂಡ್ ಸಿವಿಲ್ ಸಪ್ಲೈಸ್, ಕರ್ನಾಟಕ ಹೌಸಿಂಗ್ ಬೋರ್ಡ್, ಕರ್ನಾಟಕ ಡೈರಿ ಡೆವಲಪ್‌ಮೆಂಟ್, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ಇವೆಲ್ಲಾ ಸಾರ್ವಜನಿಕರಿಗೆ ಬಹಳ ಪ್ರಾಮುಖ್ಯವಾಗಿ ಕೆಲಸ ಮಾಡತಕ್ಕಂಥ ನಿಗಮಗಳು. ಬೈರೇಗೌಡರನ್ನು ಇವೊತ್ತು ವ್ಯವಸಾಯ ಮಂತ್ರಿಯನ್ನಾಗಿ ಮಾಡಿದ್ದಾರೆ. ಗೋವಿಂದೇಗೌಡರಿಗೆ ತೆಗೆದುಕೊಂಡು ಹೋಗಿ ಎಜ್ಯುಕೇಷನ್ ಮಿನಿಸ್ಟರನ್ನಾಗಿ ಮಾಡಿದ್ದಾರೆ. ಪಾಟೀಲರಿಗೆ ಸಹಕಾರ ಮಂತ್ರಿಯನ್ನಾಗಿ ಮಾಡಿದ್ದಾರೆ, ಪ್ರಕಾಶ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾರೆ, ಈ ಮಂತ್ರಿಯವರು ಮಂತ್ರಿ ಕೆಲಸ ಮಾಡದೇ ಇದ್ದರೆ ಈ ಇಲಾಖೆಗಳು ನಡೆಯುತ್ತವೆಯೇ? ಇವೊತ್ತು ಈ ನಿಗಮ ಮತ್ತು ಮಂಡಲಿಗಳು ಏನು ಇವೆ ಇವುಗಳನ್ನು ರದ್ದು ಮಾಡಿಬಿಡಿ. ಇವೊತ್ತು ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಅಧಿಕಾರಿಗಳಿಗೆ ಏನು ಜವಾಬ್ದಾರಿ? ಇವೊತ್ತು ಅಧಿಕಾರಿಗಳು ಫೈಲ್ ಫುಟ್‌ಅಫ್ ಮಾಡಿ ಒಂದು ಫೈಲ್‌ನ್ನು ಕ್ಲಿಯರ್ ಮಾಡತಕ್ಕಂಥ ಶಕ್ತಿ ಇವೊತ್ತು ಅಧಿಕಾರಿಗಳಿಗೆ ಇಲ್ಲ. ಇವೊತ್ತು ಐ.ಎ.ಎಸ್. ಮತ್ತು ಐ.ಪಿ.ಎಸ್ ಅಧಿಕಾರಿಗಳನ್ನು ನೇಮಿಸುತ್ತೀರಿ, ಯಾವ ಪುರುಷಾರ್ಥಕ್ಕಾಗಿ? ಇನ್ನು ಉಳಿದಿರತಕ್ಕಂಥದ್ದು ಮೂರು ವರ್ಷ. ಈಗಾಗಲೇ ಎಲೆಕ್ಷನ್ ಆಯಿತು. ಮೊದಲು ಈ ನಿಗಮ ಮಂಡಲಿ ಮಾಡಲಿಕ್ಕೆ ರಾಮನಗರ ಎಲಕ್ಷನ್ ಮುಗಿಯಲಿ ಎಂದು ಹೇಳಿದಿರಿ, ಅದು ಆಯಿತು. ಈಗ ಈ ಸೆಷನ್ ಮುಗಿಯಲಿ ಎಂದು ಹೇಳಿದಿರಿ. ಈ ಬಡ್ಜೆಟ್ ಸೆಷನ್ ಹೋಗುತ್ತದೋ ಏನೋ ಗೊತ್ತಿಲ್ಲ. ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವೊತ್ತು ನಿಗಮ ಮಂಡಲಿಗಳು ಸಹಿತ ಸಕ್ರಿಯವಾದ ಅಂಗ ಸಂಸ್ಥೆಗಳು. ಜಿಲ್ಲಾಪಂಚಾಯತ್, ಮಂಡಲ ಪಂಚಾಯತ್ ಮತ್ತು

ತಾಲ್ಲೂಕು ಪಂಚಾಯತ್ ಸಕ್ರಿಯವಾಗಿ ಪಾತ್ರವನ್ನು ನಿರ್ವಹಿಸದೇ ಇದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ ನಿಮ್ಮ ಸರ್ಕಾರ ಮಾಡಿದಂಥ ಕೆಲಸಗಳು ಅಲ್ಲಿ ಫಲ ಕೊಡುವುದಿಲ್ಲ. ಅದೇ ರೀತಿಯಾಗಿ ನೀವು ಏನು ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡರೂ ಸಹಿತ ನಿಗಮ ಮಂಡಲಿಯಲ್ಲಿ ಇರತಕ್ಕಂಥ ಅಲಕ್ಷ ಅಧಿಕಾರಿಗಳು ಇವೊತ್ತು ಎಷ್ಟು? ಇವೊತ್ತು 75 ನಿಗಮ ಮಂಡಲಿಗಳು ಇವೆ. ಯಾವ ನಿಗಮ ಮಂಡಲಿಗಳು ಇವೊತ್ತು ಚೆನ್ನಾಗಿ ನಡೆಯುತ್ತಿವೆ? ಯಾರಾದರೂ ಒಬ್ಬ ಮಂತ್ರಿ ತಪ್ಪು ಮಾಡಿದರೆ ನೇರವಾಗಿ ಹಾಕಿ ಅನ್ನುತ್ತೀರಿ. ಆದರೆ ಇವೊತ್ತು ಅಧಿಕಾರಿಗಳು ಎಷ್ಟು ಜನ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ ಇವರೆಲ್ಲರೂ ಸಹಿತ ಯಾರೂ ಸರಿಯಾಗಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ಇವೊತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಬಿ.ಟಿ ಸೋಮಣ್ಣನವರನ್ನು ನಾವು ನೆನೆದುಕೊಳ್ಳಬೇಕು. ಅವರು ಅಧ್ಯಕ್ಷರಾಗಿ ಬೆಂಗಳೂರಿನಲ್ಲಿ ಸೈಟುಗಳನ್ನು ಕೊಟ್ಟಷ್ಟು ಇದುವರೆಗೆ ಯಾವ ಪುಣ್ಯಾತ್ಮರು ಕೊಡಲಿಲ್ಲ. ಇವೊತ್ತು ಒಂದು ಕೋಟಿ ಜನಸಂಖ್ಯೆ ಇರತಕ್ಕಂಥ ಬೆಂಗಳೂರಿನಲ್ಲಿ ನಾಲ್ಕು ಜನ ನಾರಿಯವರು ಆಳುತ್ತಿದ್ದಾರೆ. ಇಬ್ಬರು ಕಾರ್ಪೊರೇಷನ್‌ನಲ್ಲಿ ಇಬ್ಬರು ಬಿ.ಡಿ.ಎ.ನಲ್ಲಿ ಇವೊತ್ತು ಬಿ.ಡಿ.ಎ.ಗೆ ಒಂದು ಅರ್ಜಿ ಹಾಕಿದರೆ ಅವರು ಒಂದು ಸೈಟ್ ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಇವೊತ್ತು ಬಿ.ಡಿ.ಎ. ಹತ್ತಿರ ಹತ್ತು ಸಾವಿರ ಎಕರೆ ಜಮೀನು ಇದೆ. ಹತ್ತು ಸಾವಿರ ಎಕರೆ ಜಮೀನು ಬಿ.ಡಿ.ಎ. ವ್ಯಾಪ್ತಿಗೆ ಒಳಪಟ್ಟಿರತಕ್ಕಂಥದ್ದು ಇದೆ. ಸುಮಾರು 81 ಸಾವಿರ ಜನ ಅರ್ಜಿ ಹಾಕಿಕೊಂಡು ಬಕ್ ಪಕ್ಷಿಗಳಂತೆ ಕಾಯುತ್ತಿದ್ದಾರೆ. 81 ಸಾವಿರ ಅರ್ಜಿಗಳು ಇವೊತ್ತು ಬಿ.ಡಿ.ಎ.ನಲ್ಲಿ ಪೆಂಡಿಂಗ್‌ನಲ್ಲಿವೆ ಆದರೆ ಇವೊತ್ತು ಬೆಂಗಳೂರಿನಲ್ಲಿ ಇರುವವರನ್ನು ನಾಲ್ಕು ಜನ ಹೆಂಗಸರು ಆಳುತ್ತಿದ್ದಾರೆ. ನಾವು ಕೂಡ ಎಷ್ಟೋ ಹೆಂಗಸರನ್ನು ನೋಡಿದ್ದೇವೆ. ಇವೊತ್ತು ಕಾರ್ಪೊರೇಷನ್ ಹೆಂಗಸರು ಯಾರು ಎಂಬುದು ನನಗೆ ಗೊತ್ತಿಲ್ಲ. ನಾವು ಜಿಲ್ಲಾ ಪರಿಷತ್‌ನಲ್ಲಿ ಮೆಂಬರ್ ಆಗಿರತಕ್ಕಂಥ ಹೆಂಗಸರನ್ನು ನೋಡಿದ್ದೇವೆ. ವಿಧಾನ ಸಭೆಯಲ್ಲಿ ಸದಸ್ಯರಾಗಿರುವ ಸಹೋದರಿಯನ್ನು ನೋಡಿದ್ದೇವೆ. ಅದೇ ರೀತಿ ಬಿ.ಡಿ.ಎ.ನಲ್ಲಿ ಅಧ್ಯಕ್ಷರಾಗಿರುವವರನ್ನು ಮತ್ತು ಕಮೀಷನರ್‌ಗಳನ್ನು ನೋಡಿದ್ದೇವೆ. ನೀವು ಒಂದು ಸಾರಿ ಬಿ.ಡಿ.ಎ. ಕಮೀಷನರ್‌ರವರನ್ನು ನೋಡಲು ಹೋಗಬೇಕು, ಒಂದು ಸಾರಿ ಅವರು ತಲೆಯನ್ನು ಕೆದರಿದರೆ ನೀವು ಓಟೆ ಹೊಡೆದು ಈಚೆಗೆ ಬರಬೇಕಾಗುತ್ತದೆ. ಆ ಪರಿಸ್ಥಿತಿಯಲ್ಲಿ ಕಳೆದ ಮೂರು ವರ್ಷಗಳಿಂದ ಅಂತ ಕಮಿಷನರ್‌ರವರನ್ನು ಬಿ.ಡಿ.ಎ.ನಲ್ಲಿ ಇಟ್ಟುಕೊಂಡಿದ್ದೀರಿ. ಈ ಬಿ.ಡಿ.ಎ.ನಲ್ಲಿ ಕಳೆದ ಮೂರು ವರ್ಷದಿಂದ ಕೇವಲ 150 ಸೈಟುಗಳನ್ನು ಮಾತ್ರ ವಿವರಣೆ ಮಾಡಿದ್ದಾರೆ. ಮದ್ರಾಸ್ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಸೈಟ್ ವಿತರಣೆ ಹೇಗೆ ಆಗುತ್ತಿದೆ ಎಂಬುದನ್ನು ನೀವು ಒಂದು ಬಾರಿ ಹೋಗಿ ನೋಡಿ. ಅಲ್ಲಿ ನಿವೇಶನಕ್ಕಾಗಿ ಬೆಳಿಗ್ಗೆ ಅರ್ಜಿ ಹಾಕಿದರೆ ಕೇವಲ ಮೂರು ದಿವಸಗಳಲ್ಲಿ ಸೈಟನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ.

ಶ್ರೀ ಎಸ್. ಕೃಷ್ಣಪ್ಪ : ಶಿವರಾಮೇಗೌಡರೇ, ನೀವು ಭಾಷಣ ಮಾಡುತ್ತಾ ಬಿ.ಡಿ.ಎ.ನಲ್ಲಿ 81 ಸಾವಿರ ಅರ್ಜಿಗಳು ಇತ್ಯರ್ಥಕ್ಕಾಗಿ ಬಾಕಿ ಉಳಿದಿದೆ ಎಂದು ಹೇಳಿದಿರಿ. ಹಾಗೆಯೇ 150 ಸೈಟ್‌ಗಳನ್ನು ವಿತರಣೆ ಮಾಡಿದ್ದಾರೆಂದು ಹೇಳಿದಿರಿ. ಆ 150 ಅರ್ಜಿಗಳು ಯಾರ್ಯಾರದ್ದು ಎಂದು ಹೇಳಿದರೆ ಒಳ್ಳೆಯದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನನ್ನ ಹತ್ತಿರ ಆ ಪಟ್ಟಿಯಿಲ್ಲ. ಆ ಪಟ್ಟಿಯನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಅದನ್ನು ಒದಗಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಮಂತ್ರಿಗಳು, ಅವರು ಪಟ್ಟಿ ಕೇಳಿದರೆ ಇವರು ಒದಗಿಸಿ ಕೊಡುತ್ತಾರಂತೆ. ಏಕೆಂದರೆ ಇವರಿಗೆ ಮಂತ್ರಿಯಾಗಬೇಕು, ಮಂತ್ರಿಯಾಗಬೇಕು ಎನ್ನುವ ಭ್ರಮೆ ಇದೆ. ನಾನು ನಿಜವಾಗಿ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಇವರನ್ನು ಮಂತ್ರಿ ಮಾಡಬೇಡಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಿ. ಇದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ಮಾನ್ಯ ಬೈರೇಗೌಡರೇ, ಗೋವಿಂದೇಗೌಡರೇ, ನಾಗೇಗೌಡರೇ ದಯವಿಟ್ಟು ನಿಮ್ಮನ್ನು ಕೇಳಿ ಕೊಳ್ಳುತ್ತಿದ್ದೇನೆ. ನಮ್ಮ ಸ್ನೇಹಿತರಾದ ಶಿವರಾಮೇಗೌಡರನ್ನು ಬಿ.ಡಿ.ಎ. ಅಧ್ಯಕ್ಷರನ್ನಾಗಿ ಮಾಡಿಬಿಡಿ.

(ಗೊಂದಲ)

ಉಪಾಧ್ಯಕ್ಷರು : ಶಿವರಾಮೇಗೌಡ್ರೇ, ನೀವು ಬೇಗ ಮಾತನಾಡಿ ಮುಗಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಏಕೆ ಹೇಳುತ್ತಿದ್ದೇನೆಂದರೆ ಇಂದಿನವರೆಗೆ 81 ಸಾವಿರ ಬಿ.ಡಿ.ಎ.ನಲ್ಲಿ ಅರ್ಜಿ ಹಾಕಿಕೊಂಡು ಸುಮಾರು 64 ಕೋಟಿ ರೂ.ಗಳನ್ನು ತೇವಣಿ ಇಟ್ಟಿದ್ದಾರೆ. ಇದರಲ್ಲಿ 34 ಕೋಟಿ ರೂ.ಗಳನ್ನು ಡಿಪಾಸಿಟ್ ಇಟ್ಟಿದ್ದಾರೆ. ಇದರಲ್ಲಿ 9 ಕೋಟಿ ರೂ.ಗಳನ್ನು ವಾಪಸ್ಸು ಕೊಟ್ಟಿದ್ದಾರೆ. ಯಾವ ಜನರಿಗೆ ಬಿ.ಡಿ.ಎ.ನಲ್ಲಿ ಇಷ್ಟು ವರ್ಷವಾದರೂ ಸೈಟ್ ಸಿಗಲಿಲ್ಲವೋ ಅಂಥವರು ನಿಮ್ಮ ಸಹವಾಸವೇ ಬೇಡ ಎಂದು ಹೇಳಿ ಹಣವನ್ನು ವಾಪಸ್ಸು ಕೇಳಿದವರಿಗೆ ಈ ರೀತಿಯಾಗಿ 9 ಕೋಟಿ ರೂ.ಗಳನ್ನು ವಾಪಸ್ಸು ಕೊಟ್ಟಿದ್ದಾರೆ. ಆದರೆ 25 ಕೋಟಿ ರೂ.ಗಳ ಬಾಕಿ ಇದೆ, ಆದರೆ ಇದಕ್ಕೆ ನೀವು ಬಡ್ಡಿಯನ್ನು ಸಾರ್ವಜನಿಕರಿಗೆ ಕೊಡುತ್ತಿಲ್ಲ. ಇವೊತ್ತು 10 ಸಾವಿರ ಎಕರೆಯಲ್ಲಿ 6 ಸಾವಿರ ಎಕರೆ ಜಮೀನು ಲಿಟಿಗೇಷನ್‌ಗೊಳಪಟ್ಟಿದೆ. ಜಮೀನುದಾರರಿಗೆ ಲೀಗಲ್ ಆಡ್ವೈಸರ್‌ಗಳೇ ಹೇಗೆ ಬೇಕೋ ಹಾಗೆ ಕೋರ್ಟ್‌ನಲ್ಲಿ ಸ್ಟೇ ತಂದು ಕೊಡುವ ಬಗ್ಗೆ ಹೇಳಿಕೊಡುತ್ತಾರೆ. ಇವೊತ್ತು ಸಿಕ್ಸ್ ಒನ್ ಮತ್ತು ಫೋರ್ ಒನ್ ನೋಟಿಫಿಕೇಷನ್ ಮಾಡಿದ್ದೀರಿ. ಆದರೆ ಅದನ್ನು ಬಿ.ಡಿ.ಎ. ದವರು ಕೇವಲ ಪೇಪರ್ ಮೇಲೆ ಮಾಡಿದ್ದಾರೆ ವಿನಃ ಪೊಸಿಷನ್‌ನಲ್ಲಿ ಯಾರೂ ಇಲ್ಲ. ಇವೊತ್ತು ಪೊಸಿಷನ್‌ನಲ್ಲಿರತಕ್ಕಂಥವರೆಲ್ಲ ಜಮೀನು ಮಾಲೀಕರೂ ಅಲ್ಲ ಮತ್ತು ಬಿ.ಡಿ.ಎ.ದವರೂ ಅಲ್ಲ ಮೂರನೆಯವರ್ಯಾರೋ ಪೊಸಿಷನ್‌ನಲ್ಲಿದ್ದಾರೆ. ಇಂಥ ಪರಿಸ್ಥಿತಿ ಇವೊತ್ತು ಅಲ್ಲಿ ನಿರ್ಮಾಣವಾಗಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಬೆಂಗಳೂರಿನಲ್ಲಿ ಒಂದು ಕೋಟಿಯ ಜನಸಂಖ್ಯೆ ಇದ್ದು ಲಕ್ಷಾಂತರ ಜನರು ನಿವೇಶನಗಳಿಲ್ಲದೇ ಒದ್ದಾಡುತ್ತಿರುವಾಗ ಬಿ.ಡಿ.ಎ. ಹೇಗೆ ಕೆಲಸ ಮಾಡಬೇಕಾಗಿತ್ತು, ಆದರೆ ಏಕೆ ಇದು ಪೂರ್ವಾಗ್ರಹಪೀಡಿತವಾಗಿದೆಯೋ, ಸರ್ಕಾರ ಇದನ್ನು ಏಕೆ ಸರಿಪಡಿಸಲಿಲ್ಲವೋ ಗೊತ್ತಿಲ್ಲ. ಯಾರದ್ದೋ ಒಂದು ಮನೆಗೆ ಹೋಗಿದ್ದೆ ಅಲ್ಲಿ ಬಿ.ಟಿ. ಸೋಮಣ್ಣನವರ ಫೋಟೋ ಹಾಕಿದ್ದರು. ಏಕೆ ಆ ಫೋಟೋ ಹಾಕಿದ್ದೀರಿ ಎಂದಾಗ ಆತ ಪುಣ್ಯಾತ್ಮ ಅವರು ಛೇರ್ಮನ್ ಆಗಿದ್ದಾಗ ಒಂದು ಸೈಟ್ ಕೊಟ್ಟಿದ್ದರು ಎಂದು ಹೇಳಿದರು. ಇವೊತ್ತು ಸೈಟ್ ಕೊಡುವುದಕ್ಕೆ ಅವಕಾಶವಿದ್ದರೂ ಸಹಿತ, ಈಗ ಆಗಿರುವ ವ್ಯವಸ್ಥಿತವಾಗಿ ತೆಗೆದುಕೊಂಡು ಹೋಗತಕ್ಕಂಥ ದಕ್ಷ ಛೇರ್ಮನ್‌ರನ್ನಾಗಲೀ,

ಕಮೀಷನರ್‌ರನ್ನಾಗಲೀ ನೇಮಿಸದೇ ಇರುವುದರಿಂದ ಇವೊತ್ತು ಬಿ.ಡಿ.ಎ. ಇಂದಿನ ದುಸ್ಥಿತಿಗೆ ಹೋಗಲು ಕಾರಣವಾಗಿದೆ. ಇವೊತ್ತು ಬಿ.ಡಿ.ಎ.ನಲ್ಲಿ 1250 ನೌಕರರಿದ್ದಾರೆ. ಇವರಿಗೆ ಸಂಬಳ ಕೊಡಲು ಯಾವುದಾದರೂ ಎರಡು ಕಾರ್ನರ್ ಸೈಟ್‌ಗಳನ್ನು ಮಾರುವುದು ತದನಂತರ ಸಂಬಳ ಕೊಡುವುದು ಈ ರೀತಿ ಲಿಲ್ಲಿ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ಅವರು ಮಾಡದಿದ್ದರೆ ಬಿ.ಡಿ.ಎ.ಯನ್ನು ಮುಚ್ಚುವಂಥ ಪರಿಸ್ಥಿತಿ ಬರಬಹುದು. ಆದುದರಿಂದ ಇವೊತ್ತು ನೀವು ನಿಗಮ ಮತ್ತು ಮಂಡಳಿಗಳಿಗೆ ಆದಷ್ಟು ಬೇಗ ಅಧ್ಯಕ್ಷರುಗಳನ್ನು ನೇಮಕ ಮಾಡಬೇಕು. ನೀವು ಯಾರನ್ನಾದರೂ ಮಾಡಿ. ಇವೊತ್ತು ನಾನು ಮಾತನಾಡುವ ಸಂದರ್ಭದಲ್ಲಿ ನನ್ನನ್ನು ಬಿ.ಡಿ.ಎ. ಅಧ್ಯಕ್ಷರನ್ನಾಗಿ ಮಾಡಿ ಎಂದು ನಿಮಗೆ ಹೇಳಿದರು. ನಾನು ನನ್ನನ್ನು ಮಾಡಿ ಎನ್ನುವ ಪ್ರಶ್ನೆ ಉದ್ಭವಿಸುವ ಹಾಗೆ ಹೇಳಲಿಲ್ಲ. ನೀವು ಇವೊತ್ತು 5 ಜನ ಕೆ.ಸಿ.ಪಿ. ಶಾಸಕರನ್ನು ಕರೆದುಕೊಂಡು ಬಂದ ಗುತ್ತೇದಾರರವರನ್ನು ಮಂತ್ರಿಯನ್ನಾಗಿ ಮಾಡಿದಿರಿ. ಆದರೆ ನಾವು ಅದಕ್ಕೆ ಹೊಟ್ಟೆಯುರಿ ಪಡಲಿಲ್ಲ. ಆದರ ಬದಲು ಸಂತೋಷ ಪಟ್ಟೆವು. ಆದರೆ ನಾವು 10 ಜನರು ಪಕ್ಷೇತರರು ನಿಮ್ಮ ಕಡೆಗೆ ಬಂದಿದ್ದರೂ ಸಹಿತ ನೀವು ನಮ್ಮನ್ಯಾರನ್ನೂ ಕ್ಯಾರೇ ಅನ್ನಲಿಲ್ಲ. ಆದರೂ ಚಿಂತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಶಿವರಾಮೇಗೌಡರು ಮಾತನಾಡುತ್ತಾ 10 ಜನ ಪಕ್ಷೇತರರು ಬಂದಿದ್ದೇವೆ ಎಂದರು. ಆ ಹತ್ತು ಜನರು ಯಾರು? ಅವರ ದಿಕ್ಕುಗಳೇನು? ಅವರೇನೂ ಒಟ್ಟಾಗಿ ಬಂದಿದ್ದಾರಾಯೇ? ಏಕೆಂದರೆ ಕೆ.ಸಿ.ಪಿಯವರು ಒಟ್ಟಾಗಿ ಬಂದರು. ಆದರೆ ಇವರು ಸರ್ಕಾರ ಬಂದ ತಕ್ಷಣ ನಮ್ಮವರು ಹತ್ತು ಜನ ಇದ್ದೇವೆ ಎಂದು ಹೇಳುತ್ತಾರಲ್ಲಾ, ಯಾರು ಆ ಹತ್ತು ಜನರು? ಅದು ಹೋಗಲಿ ಆ ಹತ್ತು ಜನರಲ್ಲಿ ಎಲ್ಲರೂ ಮಂತ್ರಿಯಾಗಬೇಕು ಎನ್ನುವವರು. ಈ ರೀತಿ ಇದ್ದರೆ ಯಾರಿಗೆ ಮಂತ್ರಿ ಸ್ಥಾನ ಕೊಡುತ್ತೀರಿ? ಇದು ಸರ್ಕಾರಕ್ಕೆ ದೊಡ್ಡ ಸಮಸ್ಯೆಯಲ್ಲವೇ?

ಶ್ರೀ ಎಂ. ಶ್ರೀನಿವಾಸ್ : ಹತ್ತು ಜನರಲ್ಲಿ ಚರ್ಚೆ ಮಾಡಿ ಮೊದಲು ಶಿವರಾಮೇಗೌಡರನ್ನು ಕ್ಯಾಬಿನೆಟ್ ಗ್ರೇಡ್ ಸಚಿವರನ್ನಾಗಿ ಮಾಡಿದರೆ ಬಹಳ ಸಂತೋಷ.

ಶ್ರೀ ಎಲ್.ಆರ್. ಶಿವರಾಮೇಗೌಡ : ಆಯಿತು. ಶ್ರೀನಿವಾಸ್‌ರವರ ಆಸೆಯಂತೆ ಆಗಲಿ. ನಾನು ಏತಕ್ಕಾಗಿ ಈ ಪ್ರಮುಖ ವಿಚಾರವನ್ನು ಹೇಳುತ್ತಿದ್ದೇನೆಂದರೆ ಸರ್ಕಾರ ಈ ವಿಚಾರದಲ್ಲಿ ಕಣ್ಣು ತೆರೆಯಬೇಕಾಗಿದೆ. ಇನ್ನು 10 ಜನ ಕಡಿಮೆ ಇದ್ದರೂ ನಮ್ಮನ್ನೆಲ್ಲಾ ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಮಾಡುತ್ತಿದ್ದಿರಿ, ಆದರೆ ಇಂದು 10 ಜನ ನಿಮ್ಮ ಕಡೆ ಜಾಸ್ತಿ ಇದ್ದಾರೆ ಎಂದಾಕ್ಷಣ ನಮ್ಮನ್ನೆಲ್ಲಾ ಇಷ್ಟು ನೆಗ್ಲೆಕ್ಟ್ ಮಾಡುವುದೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಸಿ. ಬೈರೇಗೌಡ : ಈಗಾಗಲೇ ಒಂದು ಪಟ್ಟಿಯನ್ನು ತಯಾರು ಮಾಡಿದ್ದೇವೆ. ಆ ಪಟ್ಟಿಯಲ್ಲಿ ನಿಮ್ಮ ಹೆಸರೂ ಕೂಡ ಇದೆ.

ಶ್ರೀ ವಾಟಾಳ್ ನಾಗರಾಜ್ : ಈ ಸದನದ ಮುಂದೆ ಆ ಪಟ್ಟಿಯನ್ನು ಮಂಡಿಸಲೇಬೇಕು. ಅದು ಯಾವ ಪಟ್ಟಿ ಎನ್ನುವುದನ್ನು ಸ್ವಲ್ಪ ಹೇಳಬೇಕು. ಆ ಪಟ್ಟಿ ದಸ್ತಗಿರಿ ಮಾಡುವುದರ ಬಗ್ಗೆಯೋ,

ಮಂತ್ರಿಗಳನ್ನು ಮಾಡುವುದರ ಬಗ್ಗೆ ಇದೆಯೋ ಎಂಬುದು ಗೊತ್ತಾಗಬೇಕು. ಛೇರ್ಮನ್ ಮಾಡುವುದರಲ್ಲಿದೆಯೇ? ಈಗ ಶಿವರಾಮೇಗೌಡರನ್ನು ಛೇರ್ಮನರನ್ನಾಗಿ ಮಾಡಿಸುತ್ತೀರೋ?

ಶ್ರೀ ಸಿ. ಬೈರೇಗೌಡ : ನಾನು ಹೇಳಿದ್ದು ಪಟ್ಟಿಯಲ್ಲಿ ಅವರ ಹೆಸರಿದೆ ಎಂದು.

ಶ್ರೀ ಶ್ರೀನಿವಾಸ್ : ಈಗ 10 ಜನರು ಬಂದಿದ್ದಾರೆ. ಈಗಾಗಲೇ 116 ಜನರಲ್ಲಿ 43 ಜನ ಮಂತ್ರಿಗಳಿದ್ದೀರಿ. ಆದುದರಿಂದ ಈಗ ಬಂದಿರುವ ಹತ್ತು ಜನರು ಯಾವ ಪಟ್ಟಿಯಲ್ಲಿದ್ದಾರೆ. ಮಂತ್ರಿಗಳನ್ನು ಮಾಡುವ ಪಟ್ಟಿಯಲ್ಲೋ, ಛೇರ್ಮನ್‌ರನ್ನು ಮಾಡುವ ಪಟ್ಟಿಯಲ್ಲೋ ಹೇಳಬೇಕು. ಆದರೆ 10 ಜನರು ಅವರು ಇರುವಾಗ ನೀವು ಅವರನ್ನು ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಬೇಕು.

ಉಪಾಧ್ಯಕ್ಷರು : ಆಯಿತು, ಆಯಿತು. ಅವರು ಮಾತನಾಡಿ ಬೇಗ ಮುಗಿಸಲಿ ಬಿಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಈಗಾಗಲೇ ಈ ಬಗ್ಗೆ ಹೇಳಿದ್ದೇವೆ. ಹೇಳಿದ್ದರೂ ಕೂಡ ನಿಮ್ಮ ಮನಸ್ಸಿಗೆ ಇನ್ನೂ ಏಕೆ ಹೋಗಲಿಲ್ಲವೋ ಗೊತ್ತಾಗಲಿಲ್ಲ. ಏಕೆಂದರೆ ಹಿರಿಯ ಮಂತ್ರಿಗಳಾದವರು ನೀವುಗಳು ಎಲ್ಲದಕ್ಕೂ ಶಿಫಾರಸ್ಸನ್ನು ಮಾಡುತ್ತೀರಿ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಶಿಫಾರಸ್ಸನ್ನು ಮಾಡುತ್ತೀರಿ, ಅದೇ ರೀತಿಯಲ್ಲಿ ಇದನ್ನೂ ಕೂಡ ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ಮಾನ್ಯ ಪ್ರಕಾಶ್‌ರವರು ಈ ಬಗ್ಗೆ ಹೆಚ್ಚು ಗಮನಹರಿಸಿ ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ. ಏಕೆಂದರೆ 10 ಜನ ಶಾಸಕರು ಸಪೋರ್ಟ್ ಕೊಡುವುದು ಸಣ್ಣ ವಿಷಯವೇನಲ್ಲ. ಏಕೆಂದರೆ ಮಹಾರಾಷ್ಟ್ರದಲ್ಲಿ 7 ಜನ ಶಾಸಕರಲ್ಲಿ 3 ಜನರನ್ನು ಮಂತ್ರಿಗಳನ್ನಾಗಿ ಮಾಡಿದ್ದಾರೆ. ಆದುದರಿಂದ

ಮಾನ್ಯ ಸದಸ್ಯರು : ರಾಜಾಸ್ಥಾನದ ಬಗ್ಗೆ ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ರಾಜಾಸ್ಥಾನದಲ್ಲಿ ನಮ್ಮವರು ಒಬ್ಬರು ಹೋಗಿದ್ದಕ್ಕೆ ನಿಮ್ಮ ಸರ್ಕಾರವೇ ಹೋಯಿತು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್, ಇವರೇನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೋ ಅಥವಾ ಮಂತ್ರಿಮಂಡಲದ ಬಗ್ಗೆ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಶಿವರಾಮೇಗೌಡರು ಮಂತ್ರಿಯಾಗ ಬೇಕಾದರೆ ಈ ಸದನದಲ್ಲಿ ಅವರು ಅದನ್ನು ಹೇಳಬೇಕೇ? ಹೋಗಬೇಕು, ಮುಖ್ಯಮಂತ್ರಿ ಹತ್ತಿರ ಕೇಳಬೇಕು. ನಾವು ಹತ್ತು ಜನರು ಬಂದಿದ್ದೇವೆ. ನಮ್ಮಲ್ಲಿ ಯಾರನ್ನಾದರೂ ಮಂತ್ರಿ ಮಾಡಿ ಎಂದು ಕೇಳಬೇಕು. ಸದನದಲ್ಲಿ ಹೇಳಿದರೆ ನಾವು ಇವರನ್ನು ಮಂತ್ರಿಯನ್ನಾಗಿ ಮಾಡುವುದಕ್ಕೆ ಆಗುತ್ತದೆಯೇ? ನಮ್ಮಲ್ಲಿದ್ದಾಗಲೂ ಅದೇ ಮಾತನ್ನು ಹೇಳಿದರು, ಮಂತ್ರಿಮಾಡಿ ಸ್ವಾಮಿ, ಮಂತ್ರಿ ಮಾಡಿ ಸ್ವಾಮಿ ಎಂದರು. ಈಗ ಆ ಕಡೆ ಹೋಗಿದ್ದಾರೆ. ಅವರಿಗೂ ಕೂಡ ಅದನ್ನೇ ಹೇಳುತ್ತಿದ್ದಾರೆ. ನಾವು ಏನು ಮಾಡಿದೆವೋ ಅದೇ ಕೆಲಸವನ್ನು ಅವರು ಈಗ ಮಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಸಗೀರ್ ಅಹಮದ್‌ರವರು ನನ್ನ ಸ್ನೇಹಿತರು. ಅವರೂ ಕೂಡ ಮಂತ್ರಿಗಳನ್ನಾಗಿ ಕೆಲಸ ಮಾಡಿದರು. ನಾನು ರಾಜ್ಯಪಾಲರ ಭಾಷಣದ ಮೇಲೆ ಜನರ ಅಡ್ಮಿನಿಸ್ಟ್ರೇಷನ್ ವಿಚಾರವನ್ನು ತೆಗೆದುಕೊಂಡು ಸರ್ಕಾರ ಹೇಗಿರಬೇಕು, ಆದರೆ ಸರ್ಕಾರ ಏನಾಗುತ್ತಿದೆ, ಶಾಸಕರು ಏನಾಗುತ್ತಿದ್ದಾರೆ, ಈ ಪಕ್ಷ ಏನಾಯಿತು, ಆ ಪಕ್ಷ ಏನಾಯಿತು ಎಂಬುದರ ಮೇಲೆಯೇ ನಾನು ಮಾತನಾಡುತ್ತಿದ್ದೇನೆ. ನಾನು ಬೇರೆ ಯಾವ ವಿಷಯದ ಮೇಲೂ ಮಾತನಾಡುತ್ತಿಲ್ಲ. ಶಾಸಕರಿಗೆ ಸಂಬಂಧಪಟ್ಟ ಹಾಗೆ, ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ವಿಷಯವನ್ನು ಚರ್ಚೆ ಮಾಡಿದರೆ ತಪ್ಪೇನಿಲ್ಲ. ಆದುದರಿಂದ ಇನ್ನು ನಿಧಾನ ಮಾಡದೆ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಕಗಳನ್ನು ಮಾಡಬೇಕು. ನೀವು ಯಾರನ್ನಾದರೂ ಮಾಡಿ. ಈ ಸದನ ಮುಗಿದ ಮೇಲೆ ಶಾಸಕರ ಆಕ್ರೋಶಕ್ಕೆ ನೀವು ಬಲಿಯಾಗುವುದು ಬೇಡ. ಈ ಸದನ ಮುಗಿದ ಮೇಲೆ ನೀರು ನಿರ್ಧಾಕ್ಷಿಣ್ಯವಾಗಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ : ಒಂದು ಪಟ್ಟಿ ತಯಾರಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಪಟ್ಟಿ ತಯಾರಾಗಿದೆ ಎಂದು ತಿಳಿದು ತಿಳಿದು ನಮಗೆ ಸಾಕಾಗಿ ಹೋಯಿತು. ಆ ರೀತಿಯಲ್ಲಿ ಬರೀ ಹೇಳುತ್ತಲೇ ಹೋಗಬಾರದು. ಸನ್ಮಾನ್ಯ ಉಪಾಧ್ಯಕ್ಷರೇ, ನೀವು ಈ ಬಗ್ಗೆ ಆದೇಶ ಕೊಡಬೇಕಾಗುತ್ತದೆ. ಅವರು ಯಾರನ್ನಾದರೂ ಮಾಡಲಿ, ಇವೊತ್ತು 75 ನಿಗಮ ಮಂಡಳಿಗಳು ಧೂಳಿಡುತ್ತಾ ಕೂತಿವೆ. ಅಲ್ಲಿ ಯಾವ ಎಂ.ಡಿ.ಯವರೂ ಕೆಲಸ ಮಾಡುತ್ತಿಲ್ಲ. ಆ ದೃಷ್ಟಿಯಿಂದಲಾದರೂ ನೀವು ಮಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಶಿವರಾಮೇಗೌಡ ಒಂದು ನಿಮಿಷ ಯೀಲ್ಡ್ ಆಗಿ. ಮಾನ್ಯ ಸದಸ್ಯರು ಹೇಳುವಂತಹ ವಿಚಾರ ಬಹಳ ಉತ್ತಮವಾಗಿದೆ. ಆದರೆ ಅವರು ಗುಂಪಿನಲ್ಲಿ ಏನು ಹೇಳುತ್ತಿದ್ದಾರೆಂದರೆ ಶಿವರಾಮೇಗೌಡರಿಗೆ ನೀವೇನಾದರೂ ಮಂತ್ರಿ ಮಾಡಿದರೆ ನಾವು ಲೋಕಶಕ್ತಿ ಕಡೆ ಹೋಗುತ್ತೇವೆಂದು ಆ ಕಡೆಯವರು ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಲೋಕಶಕ್ತಿ ಹಣೆಬರಹ ನಮಗೆಲ್ಲಾ ಗೊತ್ತಿದೆ. ನಿಮಗೆ ಗೊತ್ತಿಲ್ಲದೆ ಇದ್ದರೆ ಹೋಗಿ ಎಡವಟ್ಟು ಮಾಡಿಕೊಂಡು ಬಿಟ್ಟಿರಿ, ಹುಷಾರಾಗಿರಿ ಅಷ್ಟೇ. ಸನ್ಮಾನ್ಯ ಉಪಾಧ್ಯಕ್ಷರೇ, ಲೋಕಾಯುಕ್ತ ಎಂದು ನಮ್ಮಲ್ಲಿ ಇದೆ. ಅದರ ಬಗ್ಗೆ ಬಹಳಷ್ಟು ಜನ ಚರ್ಚೆ ಮಾಡಿದ್ದೇವೆ. ಲೋಕಾಯುಕ್ತ ಏನು ಕೆಲಸ ಮಾಡುತ್ತಿದೆ? ಅದರ ಕಾರ್ಯವೈಖರಿ ಏನಾಗಿದೆ. ಇದನ್ನು ಅಬಾಲಿಷ್ ಮಾಡಬೇಕು ಎಂದು ಮುಂದಿನ ಬೆಂಚ್‌ನಲ್ಲಿ ಕುಳಿತಿರತಕ್ಕಂಥವರು ವಿರೋಧಪಕ್ಷದಲ್ಲಿದ್ದಾಗ ಬಹಳಷ್ಟು ಜನ ಹೇಳಿದರು. ನಾನು ಸಹ ಒತ್ತಾಯ ಮಾಡುತ್ತೇನೆ, ಲೋಕಾಯುಕ್ತವನ್ನು ಅಬಾಲಿಷ್ ಮಾಡಬೇಕು. ಇದು ಒಂದು ರೀತಿ ಬಿಳಿ ಆನೆ ಇದ್ದಹಾಗೆ ಇದರಿಂದ ಏನು ಪ್ರಯೋಜನವಾಗುತ್ತಿಲ್ಲವೆನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತ ದೊಡ್ಡ ಅಧಿಕಾರಿಗಳಿಗೆ ಶ್ರೀರಕ್ಷೆ. ನೀವು ಇವತ್ತು ಯಾವುದಾದರೂ ಚೆಕ್‌ಪೋಸ್ಟ್‌ನಲ್ಲಿ ಎಸಿಟುಒ ನೂರು ರೂಪಾಯಿ ಸಾವಿರಾರು ರೂಪಾಯಿ, ತೆಗೆದುಕೊಂಡರೆ, ಅಥವಾ ವಿಲೇಜ್ ಅಕೌಂಟೆಂಟ್ 50 ರೂಪಾಯಿ

ತೆಗೆದುಕೊಂಡರೆ, ಜೂನಿಯರ್ ಇಂಜನಿಯರ್ 250 ರೂಪಾಯಿ ತೆಗೆದುಕೊಂಡರೆ ಮಾತ್ರ ನೀವು ತಕ್ಷಣ ಲೋಕಯುಕ್ತದವರು ಹಿಡಿಯುತ್ತಾರೆ. ಈ ಒಂದು ವಿಚಾರವನ್ನು ಮನೆಯಲ್ಲಿ 75 ಲಕ್ಷ ರೂಪಾಯಿ ಹಾಗೂ ನಾಲ್ಕು ಕೆ.ಜಿ. ಚಿನ್ನ ಸಿಕ್ಕಿರತಕ್ಕಂಥವರ ಮೇಲೆ ಲೋಕಾಯುಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. 'ಬಿ ರಿಪೋರ್ಟ್' ಹಾಕಿರತಕ್ಕಂಥಾದ್ದು ಈ ಸದನದಲ್ಲಿ ಇದೆ. ಇವತ್ತು ಐಎಎಸ್ ಅಧಿಕಾರಿಗಳೆಂದರೆ ಎಲ್ಲಾ ಸರ್ಕಾರಗಳು ತಲೆಮೇಲೆ ಕೂರಿಸಿಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರ್ಕಾರ ಬಿಡಬೇಕು. ಐಎಎಸ ಅಧಿಕಾರಿಗಳಲ್ಲಿ ಒಂದು ಮಾತು ಹೇಳಬೇಕಾಗುತ್ತದೆ. ಅವರಲ್ಲಿ ಒಳ್ಳೆಯವರೂ ಸಹ ಇದ್ದಾರೆ. ಈ ಸರ್ಕಾರ ಬಂದು 27 ತಿಂಗಳಾಗಿದೆ. ಯಾವ ಅಧಿಕಾರಿಗಳು ಸಾರ್ವಜನಿಕರಿಗೆ ಸ್ಪಂದನೆ ಮಾಡುವುದಿಲ್ಲವೋ ಅಂತಹ ಅಧಿಕಾರಿಗಳಿಗೆ ಫೈಲ್ ಹೋಗದೆ ಇರತಕ್ಕಂಥ ಜಾಗಕ್ಕೆ ನೀವು ವರ್ಗಾವಣೆ ಮಾಡಬೇಕು. ಇಲ್ಲದೆ ಇದ್ದರೆ ಸಾರ್ವಜನಿಕರು ಹೋದಾಗ, ಸಾರ್ವಜನಿಕರು ಹೋದಾಗ ಇರಲಿ, ಈ ಸದನದಲ್ಲಿ ಮೇಲ್ನೆಯಲ್ಲಿ ಚರ್ಚೆಯಾಗಿದೆ. ಇವತ್ತು ಐಎಎಸ ಅಧಿಕಾರಿಗಳು ಶಾಸಕರಿಗೆ ಮರ್ಯಾದೆ ಕೊಡುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ಅದು ಯಾರು ಎಂದು ಹೆಸರು ಹೇಳಿದರೆ ನಾವು ತಿಳಿದುಕೊಳ್ಳಬಹುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಅದನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯಮಂತ್ರಿಗಳು ಯಾರಾದರೂ ಆ ಸಂದರ್ಭದಲ್ಲಿ ಕೇಳಿದಾಗ ಏನು ಬೇಕೋ ಆ ಡಾಕ್ಯುಮೆಂಟ್ ಒದಗಿಸುತ್ತೇನೆ. ತಮಗೆ ಬೇಕಾದರೆ ಸಪರೇಟಾಗಿ ಕೇಳಿ ನಾನು ಕೊಡುತ್ತೇನೆ. ಒಳ್ಳೆಯವರಿಗೆ ನೀವು ಶಹಭಾಸಗಿರಿ ಕೊಡಿ. ಬಹಳ ಒಳ್ಳೆಯ ಜನ ಇದ್ದಾರೆ. ಸಾರ್ವಜನಿಕರು ಎಂದರೆ, ಸಾರ್ವಜನಿಕ ಕೆಲಸ ಎಂದರೆ ದೇವರ ಕೆಲಸ ಎಂದು ಪ್ರಮಾಣ ಮಾಡಿ ಮಾಡತಕ್ಕಂಥ ಅಧಕಾರಿಗಳು ಇದ್ದಾರೆ. ಇವತ್ತು ಅಂತಹವರಿಗೆ ಒಳ್ಳೆಯ ಸ್ಥಾನಮಾನ ಕೊಟ್ಟು, ಒಳ್ಳೆಯ ಜಾಗ ಕೊಟ್ಟು ಕೆಲಸ ಮಾಡಿಸಿದರೆ ಅವರಿಗೂ ಸಹ ಶಹಭಾಶಗಿರಿ ಕೊಟ್ಟಹಾಗೆ ಆಗುತ್ತದೆ. ಇನ್ನು ಕೆಲವರು ಕೆಟ್ಟವರಿದ್ದಾರಲ್ಲಾ ಅವರನ್ನು ವೀರಪ್ಪನ್ ಹಿಡಿಯುವಂತಹ ಕೆಲಸಕ್ಕೂ ಅಥವಾ ಸಾರ್ವಜನಿಕರಿಗೆ ಸ್ಪಂದನೆ ಮಾಡದೇ ಇರತಕ್ಕಂಥ, ಫೈಲಗಳು ಹೋಗದೆ ಇರತಕ್ಕಂಥ ಒಂದು ಕಾರು, ಒಂದು ಪಿ.ಎ. ಫೋನ್ ಇಲ್ಲದೆ ಇರತಕ್ಕಂಥ ಹುದ್ದೆಗಳು ಇದೆ. ಅಂತಹ ಜಾಗಗಳಿಗೆ ಐಎಎಸ್ ಅಧಿಕಾರಿಗಳನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್. ಶಿವಪ್ಪ : ವೀರಪ್ಪನ್ ಹಿಡಿಯುವಂತಹ ಕೆಲಸಕ್ಕೆ ದಕ್ಷ ಅಧಿಕಾರಿಗಳನ್ನು ಮಾತ್ರ ಕಳುಹಿಸುತ್ತಾರೆ. ಅದಕ್ಷ ಅಧಿಕಾರಿಗಳನ್ನು ವೀರಪ್ಪನನ್ನು ಹಿಡಿಯುವುದಕ್ಕೆ ಕಳುಹಿಸುವುದಿಲ್ಲ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಏಕೆ ಈ ಮಾತು ಹೇಳಿದೆನೆಂದರೆ ದಕ್ಷ ಅಧಿಕಾರಿಗಳು ಜನತೆಗೆ ಸ್ಪಂದನೆ ಮಾಡುತ್ತಾರೆ, ಆದರೆ ದುರಾಂಹಕಾರದಿಂದ ಮೆರೆಯತಕ್ಕಂಥ ಅಧಿಕಾರಿಗಳಿದ್ದಾರೆ, ಅಂತಹವರನ್ನು ಅಲ್ಲಿ ಬಲೆ ಹಾಕಿ. ಇನ್ನೊಂದು ವಿಚಾರವೇನೆಂದರೆ, ಈಗ ನೀವು ಸಬ್ಜೆಕ್ಟ್ ಕಮಿಟಿ ಮಾಡಿದ್ದೀರಿ, ಅದಲ್ಲದೆ, ಒಂಬತ್ತು ಸದನ ಸಮಿತಿಗಳು ಇವೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅಂದಾಜು ಸಮಿತಿ, ಪಬ್ಲಿಕ್ ಅಂಡರ್‌ಟೇಕಿಂಗ್

ಕಮಿಟಿ ಇದೆ. ಒಂದು ಮಾತು ಹೇಳುವುದಾದರೆ ಮಧ್ಯಾಹ್ನದ ಹೊತ್ತು ಫೋನ್ ಮಾಡಿದರೆ ಯಾವ ಅಧಿಕಾರಿಗಳೂ ನೂರಕ್ಕೆ 80 ಭಾಗ 10.00 ಗಂಟೆ ಮೇಲೆ ಒಂದು ಫೋನ್‌ಗೆ ಸಿಕ್ಕಿದರೆ ಹೇಳುತ್ತೇನೆ, ಹಾಗೇನಾದರೂ ಸಿಕ್ಕಿದರೆ ಅದು ನಿಮ್ಮ ಪುಣ್ಯ ಎಲ್ಲಿಗೆ ಹೋಗಿದ್ದಾರೆಂದು ಕೇಳಿದರೆ, ಸಬ್ಜೆಕ್ಟ್ ಕಮಿಟಿ ಮೀಟಿಂಗ್‌ಗೆ ಹೋಗಿದ್ದಾರೆ, ಸದನದ ಸಮಿತಿ ಮೀಟಿಂಗ್ ಹೋಗಿದ್ದಾರೆ, ಮಂತ್ರಿಗಳ ಹತ್ತಿರ, ಚೀಫ್ ಸೆಕ್ರೆಟರಿ ಹತ್ತಿರ, ಸೆಕ್ರೆಟರಿ ಹತ್ತಿರ ಹೋಗಿದ್ದಾರೆ ಎನ್ನುವ ಸಬೂಬು ಹೇಳುತ್ತಾರೆ ಹೊರತು ಯಾವ ಅಧಿಕಾರಿಗಳು ಸಿಗತಕ್ಕಂಥ ವ್ಯವಸ್ಥೆ ಇಲ್ಲ. ನಮ್ಮ ಹಿರಿಯ ಮಂತ್ರಿಗಳು, ಮುಖ್ಯಮಂತ್ರಿಗಳು ದಕ್ಷರು ಇದ್ದೀರಿ, ಅದಕ್ಕೆ ನಿಮ್ಮ ಕಾಲದಲ್ಲಾದರೂ ಇದಕ್ಕೆ ಕಡಿವಾಣ ಹಾಕಬೇಕು. ಇವತ್ತು ಇದನ್ನು ನೀವು ಮಾಡದೇ ಇದ್ದರೆ, ಇವರಿಗೆ ಬುದ್ಧಿ ಕಲಿಸದೆ ಇದ್ದರೆ ಇದು ಬಹಳ ಕಷ್ಟವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತೊಂದು ವಿಚಾರವೇನೆಂದರೆ ಇವತ್ತು ಪೆನ್‌ಷನ್ ಪದ್ಧತಿ ಬಗ್ಗೆ ಹೇಳಬೇಕಾಗಿದೆ. ಸರ್ಕಾರದಲ್ಲಿ ಪೆನಷನ ಪದ್ಧತಿ ಇದೆ. ನಾನು ತಿಳಿದಮಟ್ಟಿಗೆ ಯಾವ ರಾಷ್ಟ್ರದಲ್ಲೂ ಸಹ ಕೆಲವು ಸಣ್ಣಪುಟ್ಟ ರಾಷ್ಟ್ರಗಳು ಇರಬಹುದು, ಪ್ರಜಾಪ್ರಭುತ್ವದಲ್ಲಿ ದೊಡ್ಡ ರಾಷ್ಟ್ರಗಳಲ್ಲಿ ಭಾರತ ದೇಶದಲ್ಲಿ ಇರತಕ್ಕಂಥ ಸರ್ಕಾರಿ ನೌಕರರನ್ನು 58 ವರ್ಷದವರೆಗೆ ಸರ್ಕಾರ ಆಳಿಯನ ಹಾಗೆ ನೋಡಿಕೊಳ್ಳುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದು ಹೇಗೆ? ಆಳಿಯನ ಹಾಗೆ ನೋಡಿಕೊಳ್ಳುತ್ತಾರೆಂದರೆ ಏನು? ಆ ಸೂತ್ರಗಳನ್ನು ಹೇಳಬೇಕು. ಆಳಿಯ ಎಂದರೆ ಏನು? ಯಾವ ತರಹ? ನೋಡಿಕೊಳ್ಳುವುದು, ಅದೆಲ್ಲಾ ಹೇಳಬೇಕಲ್ಲಾ. ಸುಮ್ಮನೆ ಆಳಿಯನ ಹಾಗೆ ನೋಡಿ ಕೊಳ್ಳುತ್ತಾರೆ ಎಂದರೆ ನಮಗೆ ಅರ್ಥವಾಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಆಳಿಯನ ಹಾಗೆ ಎಂದರೆ ಎಷ್ಟು ಸೊಗಸಾಗಿ ಅತ್ತೆ ಮನೆಯಲ್ಲಿ, ಅತ್ತೆ ಮತ್ತು ಮಾವ ಆಳಿಯ ಚೆನ್ನಾಗಿರಲಿ ಎಂದು ನೋಡಿಕೊಳ್ಳುತ್ತಾರೆ, ಅದೇ ಪ್ರಕಾರ ಸರ್ಕಾರ ಇವತ್ತು ಅಧಿಕಾರಿಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು ನಿವೃತ್ತಿಯಾದ ಮೇಲೆ ಪೆನ್‌ಷನ್ ಕೊಡುತ್ತಿದ್ದೀರಿ. ಈ ಪೆನ್‌ಷನ್‌ಗೆಂದು 350 ಕೋಟಿ ರೂಪಾಯಿ ಹೋಗುತ್ತಿದ್ದು, ಅದರಲ್ಲಿ 60 ಕೋಟಿ ರೂಪಾಯಿಯನ್ನು ಪೆನ್‌ಷನ್ ಬಟವಾಡೆ ಮಾಡತಕ್ಕಂತಹ ನೌಕರರಿಗೆ ಕೊಡುತ್ತಿದ್ದೀರಿ. ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಆಳಿಯನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದರೆ ವರದಕ್ಷಿಣೆ ಕಾಟ ಏನಾದರೂ ಇದೆಯೇ ಎಂದು ಹೇಳಬೇಕಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಇವತ್ತು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಾರೆ. ಕೆಲಸ ಮಾಡುವವರಿಗೆ ಗ್ರಾಚ್ಯುಯಿಟಿ ಎಂದು ಕೊಟ್ಟು ಅವರನ್ನು ಒಂದೇ ಸಲ ಕೆಲಸದಿಂದ ಬಿಟ್ಟ ತಕ್ಷಣ ಮನೆಗೆ ಕಳುಹಿಸುತ್ತಾರೆ. 350 ಕೋಟಿ ರೂಪಾಯಿ ನಿವೃತ್ತ ವೇತನವನ್ನು ಬಟವಾಡೆ ಮಾಡುವುದಕ್ಕೆ 60 ಕೋಟಿ ರೂಪಾಯಿ ಕೊಟ್ಟು ಜನರನ್ನು ಇಟ್ಟುಕೊಂಡಿದ್ದಾರೆ, ಇದು ಎಂತಹ ವ್ಯವಸ್ಥೆ? ಇದು ಬ್ರಿಟಿಷರ ಕಾಲದಿಂದ ಬಂದಿರತಕ್ಕಂಥ ಪದ್ಧತಿ. ನೀವು ಕೆಲಸ ಕೊಡುವುದು

ಒಂದು ವಿಧ, ಕೊಟ್ಟಾದ ಮೇಲೆ ಇವರ ರಿಟೈರ್ಡಆದಮೇಲೆ ಮಾನವ ತರಹ ಮಾವ ಚೆನ್ನಾಗಿರಲಿ ಎಂದು ನೋಡಿಕೊಳ್ಳುತ್ತಾರಲ್ಲಾ ಹಾಗೆ ವ್ಯವಸ್ಥೆ ನಮ್ಮ ಸರ್ಕಾರದಲ್ಲಿ ಇದೆ. ಆದುದರಿಂದ ಈ ಒಂದು ಪೆನ್‌ಷನ್ ಪದ್ಧತಿಯನ್ನು....

ಶ್ರೀ ವಾಟಾಳ್ ನಾಗರಾಜ್ : ಇದು ಸ್ವಂತ ಅನುಭವವೇ ಹೇಗೆ? ನಮಗೆ ಅರ್ಥ ಆಗಬೇಕಲ್ಲಾ, ಅಳಿಯ ಎಂದರೆ ಮೊದಲಿನ ವರ್ಷದ ಅಳಿಯನೋ, ಎರಡನೇ ವರ್ಷದ ಅಳಿಯನೋ ನಾಲ್ಕನೆ ವರ್ಷದ ಅಳಿಯನೋ, ಅದರಲ್ಲಿ ಸ್ಟೇಜ್ ಬೈ ಸ್ಟೇಜ್ ಇರುತ್ತದೆ.

ಉಪಾಧ್ಯಕ್ಷರು : ಸಭೆ ಮುಗಿದಮೇಲೆ ಹೇಳುತ್ತಾರೆಂತೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಭೆ ಮುಗಿದಮೇಲೆ ನಿಮಗೆ ನಾನು ಹೇಳುತ್ತೇನೆ. ಇವತ್ತು ಅಧಿಕಾರಿಗಳಿಗೆ ಸಂಬಳದ ಕಾಲವಲ್ಲ. ಇದು ಗಿಂಬಳ ಕಾಲ. ನೀವು ಕೊಡತಕ್ಕಂಥ ಐದು-ಐದೂವರೆ ಸಾವಿರ ರೂಪಾಯಿ ಸಂಬಳ ಅವರಿಗೆ ಮೂರು ದಿವಸ ಬರುವುದಿಲ್ಲ. ಅದರಲ್ಲಿ 10 ಪರ್ಸೆಂಟ್ ಒಳ್ಳೆಯವರು ಇದ್ದಾರೆ. ಇನ್ನು 90 ಭಾಗ ಜನರಿಗೆ ಅಧಿಕಾರಿಗಳಿಗೆ ನೀವು ಕೊಡತಕ್ಕಂಥ ಸಂಬಳ ಮೂರು ದಿವಸ ಸಾಲುವುದಿಲ್ಲ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತೇನೆ. ಇದಕ್ಕೆ ಏನಾದರೂ ಯೋಚನೆ ಮಾಡಿ. ನಿಮ್ಮ ಎಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ, ಇನ್ನು ಕೆಲವು ಡಿಪಾರ್ಟಮೆಂಟ್‌ಗಳು ಏನಿವೆ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗಳು ಇವುಗಳಿಗೆಲ್ಲಾ ಸಂಬಳ ಬೇಕಾಗಿಲ್ಲ. ಅವರು ಹೇಗಿದ್ದರೂ ರೇಟ್ ಫಿಕ್ಸ್ ಮಾಡಿದ್ದಾರೆ. ಉದಾಹರಣೆಗೆ ಜಿಲ್ಲಾಪರಿಷತ್‌ನಲ್ಲಿ, ಪಿಡಬ್ಲ್ಯೂಡಿಯಲ್ಲಿ ನೀರಾವರಿಯಲ್ಲಿ ನೋಡಿ ದುಡ್ಡು ಕೊಡುವಾಗಲೇ ಕಂಟ್ರಾಕ್ಟರ್‌ನಿಗೆ ದುಡ್ಡು ಮುರಿದುಕೊಂಡು ಬಿಡುತ್ತಾರೆ. ಹಿಂದೆ ಎಲ್ಲಾ ಅವರು ಕೊಟ್ಟಮೇಲೆ ಭಕ್ಷೀಸು ತೆಗೆದುಕೊಳ್ಳುತ್ತಿದ್ದರು. ಈಗ ಹಾಗೆ ಇಲ್ಲ. ಅವರು ಕೊಡುವುದಕ್ಕಿಂತ ಮುಂಚೆ ಒಂದು ಲಕ್ಷ ಬಿಲ್ ಆದರೆ 25 ಸಾವಿರ ರೂಪಾಯಿ ಹಿಡಿದುಕೊಂಡು ಉಳಿದ 75 ಸಾವಿರ ರೂಪಾಯಿಯನ್ನು ಅವರೇ ತಲುಪಿಸಿಬಿಡುತ್ತಾರೆ. ಏಕೆಂದರೆ ಆ ಕಂಟ್ರಾಕ್ಟರ್ ಎಲ್ಲಾದರೂ ತಪ್ಪಿಸಿ ಬಿಡುತ್ತಾನೇನೋ ಎಂದು. ಇಂತಹ ಮನೋಭಾವನೆ ಇರುವಾಗ ತಾವು ಇದಕ್ಕೆ ಸರ್ಕಾರ ಚಿಂತನೆ ಮಾಡಬೇಕು. ನೀವು ಕೊಡತಕ್ಕಂಥ ಸಂಬಳದಿಂದ ಅವರಿಗೆ ತೃಪ್ತಿ ಇಲ್ಲ. ಆ ಸಂಬಳವನ್ನು ನಿಲ್ಲಿಸಿ. ಮಾನ್ಯ ಗೋವಿಂದೇಗೌಡರ ಇಲಾಖೆ ಏನಿದೆ ಅಲ್ಲಿ ಭ್ರಷ್ಟಚಾರ ಇಲ್ಲ. ಇನ್ನು ಕೃಷಿ ಇಲಾಖೆಯಲ್ಲಿ ತಾವು ಬಂದಮೇಲೆ ತರಾಟೆಗೆ ತೆಗೆದುಕೊಂಡು ಬಿಗಿ ಮಾಡಿದ್ದೀರಿ. ಬೇರೆ ಇಲಾಖೆಗಳಲ್ಲಿ ಎಂಜಿನಿಯರ್ ಡಿಪಾರ್ಟಮೆಂಟ್, ರೆವಿನ್ಯೂ ಡಿಪಾರ್ಟ್‌ಮೆಂಟ್, ತಾಲ್ಲೂಕು ಆಫೀಸುಗಳಲ್ಲಿ ಹೋಗಿ, ಇಷ್ಟು ಎಂದು ಕಿತ್ತುಕೊಳ್ಳದೆ ಕಳುಹಿಸುವ ಪ್ರಶ್ನೆಯಿಲ್ಲ. ಯಾವ ಸರ್ಕಾರ ಬರಲಿ ಯಾವ ಸರ್ಕಾರ ಹೋಗಲಿ, ಕಳೆದ 40 ವರ್ಷಗಳಿಂದ ಇದು ನಡೆದುಕೊಂಡು ಬಂದಿರತಕ್ಕಂಥ ಪರಿಸ್ಥಿತಿ. ಗ್ರಾಮಪಂಚಾಯಿತಿಗಳಲ್ಲಿ ಇದೇ ಪರಿಸ್ಥಿತಿ ಇದೆ. ಈ ಸಂಬಳವನ್ನು ನಿಲ್ಲಿಸಿ ಇದನ್ನು ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಿ ಕೊಳ್ಳುವಂಥಾದ್ದರ ಬಗ್ಗೆ ಚಿಂತನೆ ಮಾಡಬೇಕು. ಇವತ್ತು ಅಧಿಕಾರಿಗಳು ಕಾರುಗಳನ್ನು ಉಪಯೋಗಿಸುತ್ತಾರೆ. ಫೋನ್ ಉಪಯೋಗಿಸುತ್ತಾರೆ. ತಾವು ಈಗ ನೋಡಬೇಕು. ಇವತ್ತು ಹೇಗೆ ಕಾರು, ಫೋನ್ ದುಬಾರಿಯಾಗಿದೆ

ಎಂದು. ಇವರು ತರಕಾರಿ ತರುವುದಕ್ಕೆ, ಮಾಂಸ ತರುವುದಕ್ಕೆ, ಮೀನು ತರುವುದಕ್ಕೆ, ಕೋಳಿ ತರುವುದಕ್ಕೆ, ಸಿನಿಮಾ ನೋಡುವುದಕ್ಕೆ, ಟೈಪಿಸ್ಟ್ ಸ್ಟೆನೋ ಬಿಡುವುದಕ್ಕೆ ಸರ್ಕಾರಿ ಕಾರುಗಳನ್ನು ಉಪಯೋಗಿಸುತ್ತಾರೆ.

7.00 ಪಿ.ಎಂ.

ಸನ್ಮಾನ್ಯ ಉಪಾಧ್ಯಕ್ಷರ, ಇವೊತ್ತು ತಾವು ನೋಡಬೇಕು, ಎಲ್ಲಿ ಫೋನ್ ಕಾಲ್ ಮಾಡುವ ಅಗತ್ಯ ಇರುತ್ತದೆಯೋ ಅಲ್ಲಿ ಕಾಲ್ ಮಾಡುವುದಕ್ಕೆ ಸರ್ಕಾರ ಬೇಡ ಎನ್ನುವುದಿಲ್ಲ, ಯಾರೂ ಬೇಡ ಎನ್ನುವುದಿಲ್ಲ. ಮಂತ್ರಿಗಳ ಹತ್ತಿರ ಮತ್ತು ಅಧಿಕಾರಿಗಳ ಹತ್ತಿರ ಪಿ.ಎ.ಗಳು ಇದ್ದಾರಲ್ಲಾ ನಾವೇನಾದರೂ ಹೊರದೇಶಕ್ಕೆ ಒಂದು ಐ.ಎಸ್.ಡಿ. ಕಾಲ್ ಮಾಡಬೇಕೆಂದರೆ ನಮ್ಮ ಜೇಬಿನಿಂದ ದುಡ್ಡು ಕೊಡತಕ್ಕವರು ನಾವು ಯೋಚನೆ ಮಾಡುತ್ತೇವೆ. ಇವೊತ್ತು ಐ.ಎಸ್.ಡಿ. ಕಾಲ್‌ಗಳನ್ನು ಲೆಕ್ಕವಿಲ್ಲದಂತೆ ಇವರು ಮಾಡುತ್ತಾರೆ. ನಾನು ಯಾವುದೋ ಒಂದು ಆಫೀಸಿನಲ್ಲಿ ಹೋಗಿ ಕುಳಿತಿದ್ದೆ, ಅಲ್ಲಿ ಒಬ್ಬ ಅಧಿಕಾರಿಯು ಪಿ.ಎ. ಇವೊತ್ತು ನನ್ನ ಬರ್ತಡೆ ಇದೆ ನೀವು ಆ ಕಡೆಯಿಂದ ನನಗೆ ಅಭಿನಂದನೆಯನ್ನು ಹೇಳಿ ಎಂದು ದುಬೈಗೆ ಫೋನ್ ಮಾಡುತ್ತಾನೆ. ಇವೊತ್ತು ಸರ್ಕಾರಿ ಫೋನುಗಳನ್ನೆಲ್ಲಾ ದುರುಪಯೋಗ ಮಾಡಿ ಕೊಳ್ಳುವಂತಹದಕ್ಕೆ ಬಿಗಿ ಹಾಕಬೇಕು ಎಂದು ಹೇಳಲಿಕ್ಕೆ ನಾನು ಇಚ್ಛಿಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಕಾರಿನ ಮೇಲೆ ಗೂಟ, ಇದರ ಬಗ್ಗೆ ಎರಡು ಮೂರು ಸಾರಿ ಚರ್ಚೆಯಾಗಿದೆ. ಕಾರಿನ ಮೇಲೆ ಗೂಟ ಮತ್ತು ಕಾರಿನ ಮೇಲೆ ರೆಡ್ ಲೈಟ್ ಇದೆಯಲ್ಲಾ, ಇವೊತ್ತು ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳೂ ಕೂಡ ಕಾರಿನ ಮೇಲೆ ಬಾವುಟ ಹಾರಿಸಿಕೊಂಡು ಹೋಗತಕ್ಕಂಥ ಶಕ್ತಿ ಸರ್ಕಾರದ ಕಾನೂನಿನಲ್ಲಿ ಇಲ್ಲ. ಅದರ ಅರ್ಥ ಅದರ ಮೇಲೆ ಇರಬಾರದು ಎಂದು ತಾನೇ. ಮಾನ್ಯ ರಾಜ್ಯಪಾಲರು, ಮಾನ್ಯ ಮಂತ್ರಿಗಳು, ದೊಡ್ಡ ದೊಡ್ಡವರು ಇಂತಿಂಥವರು ಹೋಗುತ್ತಾರೆ ಎಂದರೆ ಒಂದು ಗೌರವ ಇರುತ್ತದೆ, ಅದಕ್ಕೆ ಒಂದು ಬೆಲೆ ಇರುತ್ತದೆ. ಇವೊತ್ತು ಏನಾಗಿದೆ ಎಲ್ಲಾ ಅಧಿಕಾರಿಗಳು ಕಾರುಗಳ ಮೇಲೆ ಗೂಟ ಇದೆ. ಆ ಗೂಟ ತೆಗೆಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಮತ್ತು ಕಾರಿನ ಮೆಲೆ ಕೆಂಪು ಲೈಟು. ತಹಶೀಲ್ದಾರ ಸಹಿತ ಇವೊತ್ತು ಕೆಂಪು ಲೈಟು, ಸರ್ಕಲ್ ಇನ್‌ಸ್ಪೆಕ್ಟರ್ ಕೆಂಪುಲೈಟು, ಸನ್ಮಾನ್ಯ ಉಪಾಧ್ಯಕ್ಷರೆ ಹೀಗೆ ಹಿಂದೆ ಎಸ್.ಎಂ. ಕೃಷ್ಣಾರವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ಜಾಲಪ್ಪನವರು ಒಂದು ಪ್ರಶ್ನೆಯನ್ನು ಕೇಳಿದರು, ಇಲ್ಲೇ ಇದ್ದಂಥ ನಂಜುಂಡಸ್ವಾಮಿಯವರು ನಾನು ಹಸಿರು ಲೈಟು ಹಾಕಿಕೊಂಡು ತಿರುಗುತ್ತೇನೆ ಎಂದು ಹೇಳಿದರು. ತಾವು ಆದೇಶ ಕೊಡುವುದಾದರೆ ಇವೊತ್ತು ತಹಶೀಲ್ದಾರ ರೆಡ ಲೈಟ ಹಾಕಿಕೊಳ್ಳಬಹುದು, ಸರ್ಕಲ್ ಇನ್‌ಸ್ಪೆಕ್ಟರ್ ರೆಡ್ ಲೈಟ್ ಹಾಕಿಕೊಳ್ಳಬಹುದು ಆದರೆ ಮಂತ್ರಿಗಳು ಹಾಕತಕ್ಕಂಥ ಕಾರಿಗೂ ಅವರಿಗೂ ವ್ಯತ್ಯಾಸ ಇಲ್ಲವೆ? ಇವೊತ್ತು ಸದನದಲ್ಲಿ ಇರತಕ್ಕಂಥ ಯಾರಾದರೂ ಒಬ್ಬ ಸದಸ್ಯರನ್ನು ರೆವಿನ್ಯೂ ಮಿನಿಸ್ಟರ್ ಮಾಡಿದರೆ, ಇವೊತ್ತು ಆರ್‌ಡಿಪಿಆರ್ ಮಿನಿಸ್ಟರ್ ಮಾಡಿದರೆ ಅವರ ಕೈಕೆಳಗೆ ಆ ಐ.ಎ.ಎಸ್. ಅಧಿಕಾರಿ ಬರುತ್ತಾರೆ ಆದರೆ ಆತ ರೆಡ್ ಲೈಟ್ ಹಾಕಿಕೊಂಡು ಪುಕ ಪುಕ ಎಂದು ಎಲ್ಲಾ ಕಡೆ ಓಡಾಡುತ್ತಿರುತ್ತಾನೆ, ಆದರೆ ನಾವು ಶಾಸಕರುಗಳು ಹಾಕಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಒಂದು ನಾನು ವಿನಂತಿ ಮಾಡುತ್ತೇನೆ, ಶಾಸಕರುಗಳಿಗೆ ಬೇರೆ ಯಾವುದಾದರೂ ಒಂದು ಕಲರ್ ಕೊಡಬೇಕು. ಈಗ ರಾತ್ರಿ ಹೊತ್ತು

ಏನಾಗಿದೆಯೆಂದರೆ, ಹೆದ್ದಾರಿಗಳಲ್ಲಿ ಓಡಾಡಬೇಕೆಂದರೆ ಬಹಳ ಹಿಂಸೆಯಾಗಿದೆ. ಈಗ ಪುಟ್ಟಣ್ಣನವರೇನೊ ಹಸಿರು ಲೈಟು ಹಾಕಿಕೊಂಡು ಬಿಟ್ಟವ್ರಾರೆ ಪ್ರಾಬ್ಲಂ ಇಲ್ಲ. ಏಕೆ ನಾನು ಈ ಮಾತನ್ನು ಹೇಳುತ್ತೇನೆ ಎಂದರೆ ಈಗ ಜೀವಕ್ಕೆ ಬಹಳ ಬೆಲೆ ಇದೆ. ಇವೊತ್ತು ನೀವು ರಾತ್ರಿಹೊತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬರಬೇಕಾದರೆ ನೀವು ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಬರಬೇಕು, ನೀವು ರೋಡ್ ಬಿಟ್ಟುಬಿಟ್ಟು ಹೊಲಮಳಕ್ಕೆ ತಗೆದುಕೊಂಡು ಹೋದರೆ ಕೆ.ಎಸ್. ಆರ್.ಟಿ.ಸಿ.ಯವರು ಹೊಲಮಳಕ್ಕೆ ಎಕ್ಕಿಸಿಕೊಂಡು ಬಂದುಬಿಡುತ್ತಾನೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಚಿಂತನೆ ಮಾಡಿ ಇವೊತ್ತು ಕಾಲ ಬಹಳ ಬದಲಾವಣೆಯಾಗಿದೆ. ಈಗ ನಾವು ರಾತ್ರಿ ಹೊತ್ತು ಪ್ರಯಾಣ ಮಾಡುತ್ತೇವೆ ಎಂದು ಹೇಳಿದರೆ ಅಟಲಿಸ್ಟ್ ಯಾರೋ ಮಂತ್ರಿಗಳೊ, ವಿ.ಐ.ಪಿ.ಗಳು ಹೋಗುತ್ತಾರೆ ಎಂದರೆ ಡ್ರೈವರ್‌ಗಳು ಸ್ವಲ್ಪ ಡೈವರ್ಷನ್ ಮಾಡುತ್ತಾರೆ. ಅದಕ್ಕಾಗಿ ಯಾವುದಾದರೂ ಒಂದು ಕಲರ್ ಕೊಡುವುದಕ್ಕೆ ತಾವು ಚಿಂತನೆ ಮಾಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇವೊತ್ತು ಸರ್ಕಾರದ ವಶದಲ್ಲಿ ಸುಮಾರು ಕಾರುಗಳು ಬೆಂಳೂರಿನಲ್ಲಿದ್ದಾವೆ. ಹೊಸ ತಂತ್ರಜ್ಞಾನ ಬಂದಿದೆ. ಇವತ್ತು ಒಂದು ಲೀಟರ್ ಪೆಟ್ರೋಲನ್ನು ಅಂಬಾಸಿಡರ್ ಕಾರಿಗೆ ಹಾಕಿದರೆ 6 ಕಿ.ಮಿ. ಕೊಡತಕ್ಕಂಥ ಕಾರುಗಳಿವೆ. ಅಧಿಕಾರಿಗಳ ಹತ್ತಿರ 6.ಕಿ.ಮೀ. ಕೊಡತಕ್ಕಂಥ ಕಾರುಗಳೇ ಓಡಾಡುತ್ತಿವೆ. ನಾನು ಹೇಳುತ್ತೇನೆ ಬೆಂಗಳೂರು ನಗರದಲ್ಲಿರತಕ್ಕಂತವರು, ಮೈಸೂರು ನಗರದಲ್ಲಿರತಕ್ಕಂಥವರು ಜಿಲ್ಲಾ ಕೇಂದ್ರ ಬಿಟ್ಟು ಹೊರಗೆ ಹೋಗದೆ ಇರತಕ್ಕಂಥ ಅಧಿಕಾರಿಗಳು ಯಾರಿರುತ್ತಾರೆ ಅವರನ್ನು ಗುರುತಿಸಿ, ಹೊಸ ತಂತ್ರಜ್ಞಾನದ ಒಂದು ಲೀಟರ್ ಪೆಟ್ರೋಲ್ 20 ಕಿ.ಮೀ. ಓಡತಕ್ಕಂಥ ಅತ್ಯಾಧುನಿಕ ಚಿಕ್ಕ ಕಾರುಗಳು ಬಂದಿವೆ. ಇಂತಹ ವಾಹನಗಳನ್ನು ಸರಕಾರದ ಅಧಿಕಾರಿಗಳಿಗೆ ಕೊಡಬೇಕು. "ಒಂದು ಇಂಗ್ಲೀಷ್ ಪತ್ರಿಕೆಯಲ್ಲಿ ಬರೆಯುತ್ತಾರೆ" ಈ ಹೆಚ್ಚಿರತಕ್ಕಂಥ ಅಧಿಕಾರಿಗಳನ್ನು ಕಡಿಮೆ ಮಾಡಿ, ಅಧಿಕಾರಿಗಳು ಉಪಯೋಗಿಸತಕ್ಕಂಥ ವಾಹನಗಳು, ಸರಕಾರ ಉಪಯೋಗಿಸತಕ್ಕಂಥ ವಾಹನಗಳನ್ನು ಇವೆಲ್ಲಾ ಇತಿಮಿತಿ ಮಾಡಿದರೆ ಸರಕಾರದ ಬೊಕ್ಕಸಕ್ಕೆ ಸುಮಾರು 75 ಕೋಟಿ ರೂಪಾಯಿಗಳು ಉಳಿಯುತ್ತದೆ ಎಂದು. ಆದ್ದರಿಂದ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ, ಈ ಅತ್ಯಾಧುನಿಕ ವಾಹನಗಳು, ಹುಬ್ಬಳ್ಳಿ, ಬೆಂಗಳೂರು, ಧಾರವಾಡ, ಮೈಸೂರು ಇಂತಹ ದೊಡ್ಡ ದೊಡ್ಡ ನಗರಗಳಲ್ಲಿ ತಾವು ಅಳವಡಿಸಿದರೆ ಪೆಟ್ರೊಲ್ ಉಳಿತಾಯ ವಾಗುತ್ತದೆ. ಸರಕಾರದ ಬೊಕ್ಕಸಕ್ಕೆ ದುಡ್ಡು ಉಳಿಯುತ್ತದೆ. ಈ ಬಗ್ಗೆ ಸರಕಾರ ಚಿಂತನೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಶಿವರಾಮೇಗೌಡರು ಹೇಳಿದ್ದಕ್ಕೆ ಹೇಳುತ್ತಿದ್ದೇನೆ, ಈಗ ಹೆಚ್.ಎಲ್., ಬಿ.ಎಲ್., ಐಟಿಐ ನೊಳಗೆ ಸುಮಾರು ಹತ್ತು ಸಾವಿರ, ಇಪ್ಪತ್ತು ಸಾವಿರ ಸಂಬಳ ತೆಗೆದುಕೊಳ್ಳುವ ಜನರಲ್ ಮ್ಯಾನೇಜರ್ಸ್, ಇಂಜನಿಯರ್ಸ್ ಇತರ ಅಧಿಕಾರಿಗಳು ಇದ್ದಾರೆ ಅವರೆಲ್ಲಾ ಏನು ಮಾಡುತ್ತಾರೆ ಒಂದು ಮೆಟಡಾರ್ ವ್ಯಾನ್‌ನೊಳಗೆ ಇಪ್ಪತ್ತು ಜನ ಹೋಗುತ್ತಾರೆ. ಬೆಂಗಳೂರಿನಲ್ಲಿರ ತಕ್ಕವರು, ಮೈಸೂರಿನಲ್ಲಿರತಕ್ಕ ಅಧಿಕಾರಿಗಳೆಲ್ಲರಿಗೂ ಸೇರಿ ಒಂದು ವ್ಯಾನ್ ಮಾಡಿಕೊಟ್ಟರೆ ಎಲ್ಲರೂ ಒಂದೇ ವ್ಯಾನ್‌ನಲ್ಲಿ ಹೋಗುತ್ತಾರೆ. ಇದರಿಂದ ಸುಮಾರು ಐದು ಕಾರುಗಳ ಪೆಟ್ರೋಲ್ ಉಳಿಯುತ್ತದೆ, ಅದರ ಖರ್ಚು ಉಳಿಯುತ್ತದೆ, ಎಷ್ಟೋ ಉಳಿತಾಯವಾಗುತ್ತದೆ.

ಉಪಾಧ್ಯಕ್ಷರು : ತಾವು ಒಳ್ಳೆಯ ಸಲಹೆಯನ್ನು ಮಾಡಿದ್ದೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾವು ಬಹಳ ಸಾರಿ ಈ ಸದನದಲ್ಲಿ ಹೇಳಿದ್ದೇವೆ ಅಧಿಕಾರಿಗಳಿಗೆ ನೀವು ಬ್ಯಾಡ್ಜ್ ಕೊಡಿ ಎಂದು. ವಿಧಾನಸೌಧದಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳು ಯಾರು, ಇದೆಲ್ಲಾ ಸದನದಲ್ಲಿ ಎರಡುಮೂರು ಸಾರಿ ಚರ್ಚೆಯಾದಮೇಲೆ ಕೆಲವು ಅಧಿಕಾರಿಗಳು ಸರಪಳಿಯನ್ನು ನೇತುಹಾಕಿಕೊಂಡಿದ್ದಾರೆ. ಸರಪಳಿ ಅಂದರೆ ಬ್ಯಾಡ್ಜ್ ಹಾಕಿ ಕೊಂಡಿರತಕ್ಕಂಥದ್ದು. ಅವರು ಮಾತ್ರ ಸರಪಳಿಯನ್ನು ಹಾಕಿಕೊಂಡು ಬ್ಯಾಡ್ಜನ್ನು ಜೇಬಿನೊಳಗೆ ಇಟ್ಟು ಕೊಂಡು ಬಿಟ್ಟಿದ್ದಾರೆ, ಅದು ಈಚೆ ಕಾಣಿಸುವುದಿಲ್ಲ, ಕಂಡರೆ ಮರ್ಯಾದೆ ಹೋಗುತ್ತದೆ ಎಂದು. ಅದಕ್ಕೋಸ್ಕರ ಎಲ್ಲಾ ಅಧಿಕಾರಿಗಳು ಸಹಿತ, ಈಗ ಉದಾಹರಣೆಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರಿಗೆ ಗ್ರೀನ್, ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರಿಗೆ ರೆಡ್, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರಿಗೆ ವೈಟ್, ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕವರಿಗೆ ಬ್ಲೂ, ಈ ತರಹ ನೀವು ಬ್ಯಾಡ್ಜ್ ಕೊಟ್ಟುಬಿಟ್ಟರೆ, ಆ ಬ್ಯಾಡ್ಜ್ ನೋಡಿದ ಕೂಡಲೇ ರೈತರಿಗೆ ಈತ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ನವನು ಇಲ್ಲಿಗ್ಯಾಕೆ ಬಂದ, ಅಥವಾ ಬೆಂಗಳೂರಿನ ವಿಧಾನಸೌಧದಲ್ಲಿರತಕ್ಕ ಕ್ಯಾಂಟೀನ್‌ಗಳಿಗೆ ಅಧಿಕಾರಿಗಳು ಹೋಗಿ ಹರಟೆ ಹೊಡೆದುಕೊಂಡು ಕುಳಿತು ಕೊಳ್ಳುತ್ತಾರೆ, ಕೆಲಸವೇ ಇರುವುದಿಲ್ಲ. ಸರ್ಕಾರದಲ್ಲಿ ಒಂದು ಮಾಡಬೇಕು, ಕೆಲವು ಆಫೀಸ್‌ನಲ್ಲಿ ಮಾಡಿದ್ದಾರೆ ಎನ್ನುವ ಮಾತನ್ನು ಕೇಳಿದ್ದೇನೆ, ವಿಧಾನಸೌಧದಲ್ಲಿ, ಮಲ್ಟಿಸ್ಟೋರ್ಡ್ ಬಿಲ್ಡಿಂಗ್‌ನಲ್ಲಿ ಕೆಲವು ದೊಡ್ಡ ದೊಡ್ಡ ಆಫೀಸ್‌ಗಳಲ್ಲಿ ಇವೊತ್ತು ನೀವು ಕಾಫಿ ಕೊಡತಕ್ಕಂಥ ವ್ಯವಸ್ಥೆಯನ್ನು, ದೆಹಲಿಯಲ್ಲಿರತಕ್ಕ ವಿಜ್ಞಾನ ಭವನಕ್ಕೆ ಹೋಗಿ, ಅಥವಾ ಉದ್ಯೋಗ ಭವನಕ್ಕೆ ಹೋಗಿ, ರೈಲು ಭವನಕ್ಕೆ ಹೋಗಿ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಅಧಿಕಾರಿಗಳು ಬೆಳಿಗ್ಗೆ 10 ಗಂಟೆಗೆ ಬಂದರೆ ಸಾಯಂಕಾಲ 5 ಗಂಟೆಯವರೆಗೆ ಅತ್ತಿತ್ತ ಅಲ್ಲಾಡುವುದಿಲ್ಲ. ಇವೊತ್ತು ಅವರು ಬಹಳ ನಿಷ್ಪಕ್ಷಪಾತವಾಗಿ ಕೆಲಸಮಾಡಲಿಕ್ಕೆ ಹೋಗುತ್ತಾರೆ. ಇಲ್ಲಿ 10 ಗಂಟೆಯಿಂದ ಏನಾದರೂ ಹೇಳಿದರೆ ಕಾಫಿ ಕುಡಿಯುವುದಕ್ಕೆ ಹೋಗಿದ್ದೆವು ಎನ್ನುತ್ತಾರೆ. ಆದ್ದರಿಂದ ಅಧಿಕಾರಿಗಳಿಗೆ ಟ್ರಾಲಿ ಮುಖಾಂತರ ಕಾಫಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಹಾಗೆ ಮಾಡಿದರೆ ಇವೊತ್ತು ಬೆಂಗಳೂರಿನಲ್ಲಿ ಐದು ಲಕ್ಷ ಜನ ನೌಕರರಿರತಕ್ಕಂಥದ್ದು ಸ್ವಾಮಿ, ಐದು ಲಕ್ಷ ಜನ ಸಾಕುವುದಕ್ಕೆ ನಾವು ಐದು ಕೋಟಿ ಜನ ಕೊಡತಕ್ಕಂಥ ತೆರಿಗೆಯನ್ನು ಅಂದರೆ ಸುಮಾರು ಐದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಇವರಿಗೆ ಕೊಡುತ್ತಾ ಇದ್ದೇವೆ. ಆದರೂ ಇವರಿಂದ ಸಮರ್ಪಕವಾಗಿ ಕೆಲಸ ಆಗುತ್ತಾ ಇಲ್ಲ. ಕೆಲಸ ಆಗಬೇಕಾಗಿದ್ದರೆ ನೀವು ಕೊಡತಕ್ಕಂಥ ಸವಲತ್ತನ್ನು ಸರಿಯಾಗಿ ಕೊಟ್ಟರೆ ಅವರಿಗೆ ಕೆಲಸ ಮಾಡಲಿಕ್ಕೆ ಆಗುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಸನ್ಯಾಸ್ಯ ದೇವರಾಜ್ ಅರಸುರವರ ಕಾಲದಲ್ಲಿ ತಿಂಗಳಿಗೆ ಕೊನೆಯ ಪಕ್ಷ 20 ಅಧಿಕಾರಿಗಳನ್ನು ಮನೆಗೆ ಕಳುಹಿಸುತ್ತಿದ್ದರು. ಒಂದು ಅಥವಾ ಎರಡು ಸಿರಿಯಸ್ಸಾದ ಕೇಸ್‌ಗಳು ಬಂದರೆ ಕಳುಹಿಸುತ್ತೀರಿ ಇಲ್ಲ ಎಂದರೆ ಅದೂ ಇಲ್ಲ. ಇವೊತ್ತು ಅಧಿಕಾರಿಗಳಲ್ಲಿ ಆ ಬಿಗಿ ಹೊರಟುಹೋಗಿದೆ, ಬಿಗಿ ಇಲ್ಲದೇ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ವರ್ಗಾವಣೆ ವಿಚಾರದಲ್ಲಿ ತಾವು ಅರ್ಥ ಮಾಡಿಕೊಳ್ಳಬೇಕು, ಈ ಸರ್ಕಾರಕ್ಕೆ ನಾನು ಸಾರ್ವಜನಿಕರ

ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ, ಕಳೆದ ವರ್ಷ ಒಂದೂ ವರ್ಗಾವಣೆಯನ್ನು ಮಾಡಲಿಲ್ಲ ಎಂದು ಹೇಳಿ ಬೈರೇಗೌಡರಾಗಲೀ, ಪ್ರಕಾಶ್ ಸಾಹೇಬರಾಗಲೀ ಅಥವಾ ಗೋವಿಂದೇಗೌಡರಾಗಲಿ, ಬೋರ್ಡ್ ಹಾಕಿಬಿಟ್ಟರು ಕ್ಲೀನಾಗಿ ನಾವ್ಯಾರು ಈ ವರ್ಷ ವರ್ಗಾವಣೆ ಮಾಡುವುದಿಲ್ಲ ಎಂದು. ಆದರೆ ವರ್ಗಾವಣೆ ಮಾಡದಿದ್ದರೆ ಏನು ಪರಿಣಾಮ ಆಗುತ್ತದೆ ಎನ್ನುವುದರ ಬಗ್ಗೆ ನೀವು ಯೋಚನೆ ಮಾಡಬೇಕು.

ನಾವು ಶಾಸಕರು ಅವರ ಸಿ.ಆರ್.ಐನ್ನು ಬರೆಯುವುದಕ್ಕೆ ಅವಕಾಶವಿಲ್ಲ, ಅವರ ಹಣೆಬರಹವನ್ನು ಬರೆಯುವುದಕ್ಕೆ ಅವಕಾಶವಿಲ್ಲ. ನೀವು ವರ್ಗಾವಣೆಗಳನ್ನು ಮಾಡುವಂತಹ ವಿಚಾರದಲ್ಲಿ ಶಾಸಕರಿಗೆ ಮನ್ನಣೆ ಕೊಟ್ಟಿಲ್ಲ. ಶಾಸಕರು ಅವರ ಮೇಲೆ ಕಾನ್ಫಿಡೆನ್ಷಿಷಲ್ ರಿಪೋರ್ಟ್ ಬರೆಯಲು ಮತ್ತು ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ಕೆಲವು ಇಲಾಖೆಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಡೈರಕ್ಟರ್ ಮೂಲಕ ದುಡ್ಡನ್ನು ಕೊಟ್ಟು ವ್ಯಾಪಾರ ಮುಗಿಸಿ ತಂದು ಕೊಡುವಂತಹ ಕಾಲವನ್ನು ನಾವು ಕಣ್ಣಾರೆ ನೋಡಿದ್ದೇವೆ. ಆದರೆ ಇವತ್ತು ವರ್ಗಾವಣೆಯ ವಿಚಾರದಲ್ಲಿ ಮಾನ್ಯ ಪಟೇಲ್‌ರವರ ಸರ್ಕಾರದಲ್ಲಿ ಬಿಗಿಯಾದಂತಹ ನಿಲುವನ್ನು ತೆಗೆದುಕೊಂಡಿದೆ. ಇದು ಬಹಳ ಸ್ವಾಗತಾರ್ಹವಾದಂಥದ್ದು, ಇದೇ ರೀತಿಯಲ್ಲಿ ಇದು ಮುಂದುವರೆಯಬೇಕು. ಇನ್ನು ನೀರಾವರಿಯ ವಿಚಾರದಲ್ಲಿ ನಾನು ಈ ಸದನಕ್ಕೆ ಬಂದ ಏಳೂವರೆ ವರ್ಷಗಳಲ್ಲಿ ಐದು ಜನ ನೀರಾವರಿ ಮಂತ್ರಿಗಳನ್ನು ಮತ್ತು ಐದು ಜನ ಮುಖ್ಯಮಂತ್ರಿಗಳನ್ನು ಕಂಡಿದ್ದೇನೆ. ಈ ಸದನದಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ರೈತರ ಮಕ್ಕಳ ಹೆಸರನ್ನು ಹೇಳಿಕೊಂಡು ಅಷ್ಟು ಕೊಡಬೇಕು, ಇಷ್ಟು ಕೊಡಬೇಕೆಂದು ಹೇಳಿ 1000 ಕೋಟಿ ರೂಪಾಯಿಗಳನ್ನು ಇಟ್ಟರೂ ಸಹ 350-400 ಕೋಟಿ ರೂಪಾಯಿಗಳು ಖರ್ಚು ಆಗದೇ ಇರುವಂಥ ಪರಿಸ್ಥಿತಿಯನ್ನು ನಾವು ಈ ಸದನದಲ್ಲಿ ನೋಡಿದ್ದೇವೆ. ನಾವು ಅಂಕಿಅಂಶಗಳನ್ನು ನೋಡಿದಾಗ ಮಾನ್ಯ ದೇವೇಗೌಡರು ಅಧಿಕಾರಕ್ಕೆ ಬಂದಮೇಲೆ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನು ನಾವು ನೋಡಿದ್ದೇವೆ. ಮಾನ್ಯ ದೇವೇಗೌಡರು ಇಲ್ಲಿ ಅಧಿಕಾರವನ್ನು ಬಿಟ್ಟು ದೆಹಲಿಗೆ ಹೋದಮೇಲೆ ಇದಕ್ಕಾಗಿ 800-900 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಕೆಲವು ವಿಚಾರಗಳಲ್ಲಿ ಸರ್ಕಾರದ ಲೋಪದೋಷಗಳಿದ್ದರೆ ಅದನ್ನು ನೀವು ತಿದ್ದಿ ಹೇಳುವುದಕ್ಕೆ ಹಕ್ಕು ಇದೆ. ಅದನ್ನು ಬೇಡವೆಂದು ಹೇಳುವುದಿಲ್ಲ. ನೀರಾವರಿ, ವಸತಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರಿನ ವಿಚಾರಗಳಲ್ಲಿ ಸರ್ಕಾರ ತಾರತಮ್ಯ ಮಾಡದೆ ಕೆಲಸವನ್ನು ಮಾಡುತ್ತಿರುವುದನ್ನು ನಾವು ನೋಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಒಂದು ವರ್ಷದಲ್ಲಿ ನಾಗಮಂಗಲ, ತುರುವೇಕೆರೆ, ಕೆಲಸವನ್ನು ಮುಗಿಸಿ ಇವತ್ತು ಈ ಕೆಲಸಗಳು ನಾಗಲೋಟದಲ್ಲಿ ನಡೆಯುತ್ತಿವೆ. ಆರೂವರೆ ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಲಭ್ಯವನ್ನು ಕೊಡುತ್ತೇವೆಂದು ಹೇಳಿದ ಸರ್ಕಾರ ಈಗಾಗಲೇ ಮೂರುವರೆ ಲಕ್ಷ ಎಕರೆ ಭೂಮಿಗೆ ನೀರನ್ನು ಕೊಟ್ಟಆಗಿದೆ. ನಾನು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೆನೆಂದರೆ ಕ್ರಾಫ ಪ್ಯಾಟ್ರನ ಎಂದು ಮಾಡಿ ಯಾವ ಯಾವ ರೈತರಿಗೆ ಅದು ಹೇಮಾವತಿಯಾಗಲಿ, ಕೃಷ್ಣಾಆಗಲಿ, ಅಥವಾ ಕಾವೇರಿಯಾಗಲಿ ಯಾವ ಹೊಸ ಬೇಸಿನ್‌ನಲ್ಲಿ ನೀವು ನೀರು ಕೊಡುತ್ತಿದ್ದೀರಿ, ಆ ಸ್ಥಳಗಳಲ್ಲಿ ಕ್ರಾಪ್ ಪ್ಯಾಟ್ರನ್ ಮಾಡಿ

ಅದಕ್ಕೆ ಒಂದು ಹೊಸ ಆಕ್ಟ್ ಮಾಡಿ ಇಂಥಿಂಥ ಬೆಳೆಗಳನ್ನು ಬೆಳೆಯಬೇಕೆಂದು ನಿಗದಿ ಮಾಡದಿದ್ದರೆ ಈಗ ಉದಾಹರಣೆಗೆ ಬಹಳ ಕಷ್ಟವಾಗುತ್ತದೆ. ಚನ್ನರಾಯ ಪಟ್ಟಣದವರು ನಾಲ್ಕು ವರ್ಷದಿಂದ ನೀರು ಪಡೆದು ಎರಡು ಬೆಳೆಗಳನ್ನು ಚೆನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ. ಈಗ ಇವರು ಎರಡು ಬೆಳೆಗಳನ್ನು ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ. ಅದೇ ರೀತಿಯಲ್ಲಿ ಈಗ ನಾಗಮಂಗಲಕ್ಕೆ ನೀರು ಕೊಡುತ್ತಿದ್ದಾರೆ, ತುರುವೆಕೆರೆ ಮತ್ತು ಕುಣಿಗಲ್‌ಗೆ ನೀರು ಕೊಡುತ್ತಾರೆ. ತುರುವೇಕೆರೆ, ಕುಣಿಗಲ್ ಇವರುಗಳು ಹೊಡೆದಾಟ ಮಾಡಬೇಕಾಗುತ್ತದೆ. ಕ್ರಾಫ್ಟ್ ಪ್ಯಾಟ್ರನ್ ಅನ್ನು ಈಗಿನಿಂದ ಪ್ರಾರಂಭ ಮಾಡಿ ಅವರಿಗೆ ಬಿಗಿ ಮಾಡದೇ ಇದ್ದರೆ ನಾಳೆ ಚನ್ನರಾಯಪಟ್ಟಣ, ನಾಗಮಂಗಲ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನು ಕಳೆದ 25 ವರ್ಷದಿಂದ ಕೆ.ಆರ್.ಎಸ್.ನ ಆಧುನೀಕರಣವಾಗಲೇ ಬೇಕೆನ್ನುವಂತಹ ಸಂದರ್ಭದಲ್ಲಿ ಈ ರಾಜ್ಯದ ಯಾವುದೇ ಒಂದು ಅಣೆಕಟ್ಟಿನ ನೀರನ್ನು ನಿಲ್ಲಿಸಿ ಇವತ್ತು ಆ ಅಣೆಕಟ್ಟನ್ನು ಆಧುನೀಕರಣಗೊಳಿಸುವಂತಹ ಕೆಲಸ ತೆಗೆದುಕೊಂಡಿರುವಂಥಾದ್ದು ಇತಿಹಾಸದಲ್ಲಿ ಮತ್ತೊಂದು ಇಲ್ಲ. ಇವತ್ತು ಇದನ್ನು ಎಲ್ಲಾ ರೈತ ಮುಖಂಡರನ್ನು ಮತ್ತು ರೈತಾಪಿ ಜನರನ್ನು ಕರೆಸಿ ಮಾನ್ಯ ದೇವೆಗೌಡರು ಅಧಿಕಾರದಲ್ಲಿದ್ದಾಗ ತೀರ್ಮಾನ ಮಾಡಿ ಇವತ್ತು ಈ ಆಧುನೀಕರಣ ಕೆಲಸವನ್ನು ತೆಗೆದುಕೊಂಡು 175 ಕೋಟಿ ರೂಪಾಯಿಗಳನ್ನು ಈ ಆಧುನೀಕರಣಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಈ 179 ಕೋಟಿ ರೂಪಾಯಿಗಳಲ್ಲಿ ತುಂಗಭದ್ರ ಅಣೆಕಟ್ಟನ್ನು ಭದ್ರ ಮಾಡುವಂತಹ ಸಂದರ್ಭದಲ್ಲಿ ಈ ರೀತಿ ಮಾಡಲಿಕ್ಕೆ ಆಗಲಿಲ್ಲ. ಇವತ್ತು ವರುಣ ಕೆಲಸದಲ್ಲಿ ಮೈಸೂರಿನವರಿಗೆ ನಮಗೆ ಬಹಳ ಹೊಡೆದಾಟವಿತ್ತು. ಮಾನ್ಯ ದೇವರಾಜ ಅರಸರವರು ಮುಖ್ಯಮಂತ್ರಿಗಳಾಗಿದ್ದಾಗ ಅವರನ್ನು ಮಂಡ್ಯಕ್ಕೆ ಕರೆಸಿದಂತಹ ಕಾಲದಲ್ಲಿ ದೊಡ್ಡ ಲಾಠಿ ಛಾರ್ಜ್ ಆಗಿ ನಮ್ಮ ನಾಯಕರುಗಳು ಚಡ್ಡಿ ಮೆರವಣಿಗೆ ಎನ್ನತಕ್ಕ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಮಾಡಿದ್ದೆವು.

ಉಪಾಧ್ಯಕ್ಷರು : ಇನ್ನೂ ಸ್ವಲ್ಪ ಹೊತ್ತು ಹೋದರೆ ನಾನು ನೀವು ಇಬ್ಬರೆ ಉಳಿಯುತ್ತೇವೆ. ಆದ್ದರಿಂದ ತಾವು ಬೇಗ ಮುಗಿಸಿ, ಬಹಳ ಸಮಯವಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾರಾದರೂ ಉಳಿಯಲಿ, ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನೀವು ನಮ್ಮ ರಕ್ಷಣೆಗೆ ಬರಬೇಕು.

ಉಪಾಧ್ಯಕ್ಷರು : ಎಲ್ಲರೂ ಬೆಳಿಗ್ಗೆ 10 ಗಂಟೆಗೆ ಬಂದಿದ್ದಾರೆ, ಸಮಯವಾಗಿದೆ ತಾವು ಬೇಗ ಮುಗಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇವರು ಗಂಟೆಗಟ್ಟಲೆ ಮಾತನಾಡುವಾಗ ನಾವು ಕುಳಿತುಕೊಂಡಿರಲಿಲ್ಲವೆ? ನೀವು ಅದನ್ನು ಯೋಚನೆ ಮಾಡಬೇಕು.

ಉಪಾಧ್ಯಕ್ಷರು : ನೀವು ಭಾಷಣ ಪ್ರಾರಂಭ ಮಾಡುವಾಗ ನಾನು ವಿನಂತಿ ಮಾಡಿದ್ದೆ. ಮತ್ತೆ ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 50ನಿಮಿಷಗಳು ಆಗಿದೆ, ಬೇಗ ಮುಗಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ. ಮೈಸೂರಿನವರಿಗೂ ಮತ್ತು ಮಂಡ್ಯಾದವರಿಗೆ ಎಂತಹ ಹೋರಾಟವಿತ್ತೆಂದರೆ ಇವರ ವ್ಯಾಜ್ಯವನ್ನು ತೀರ್ಮಾನ ಮಾಡಿ

ಮಾನ್ಯ ಪ್ರಧಾನಮಂತ್ರಿಯವರ ಆದೇಶದಂತೆ ಇವತ್ತು ವರುಣ ನಾಲೆಯ ಕೆಲಸ ನಡೆಯುತ್ತಿದೆ. ಈ ನಾಲೆಯ ನೀರನ್ನು ಮೈಸೂರು ರೈತರಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. 17,000 ಎಕರೆಗೆ ನೀರು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ತಾರಕ, ಉಡುತೊರೆಹಳ್ಳ, ಮಂಚನಬೆಲೆ, ಈಗ್ಗನೂರು, ಈ ಯೋಚನೆ 20 ವರ್ಷಗಳಿಂದ ನೆನಗುದಿಗೆ ಬಿದ್ದಿತ್ತು. ಇವತ್ತು ಈ ಯೋಚನೆ ಮಾಡಬೇಕಾಗಿದೆ. ರಾಮನಗರದ ಚುನಾವಣೆ ಭಾಷಣಕ್ಕೆ ಹೋದಾಗ ಜನ ಓಟು ಯಾರಿಗಾದರೂ ಕೊಟ್ಟಿರಲಿ, ಅಲ್ಲಿನ ಜನರು ಈಗ್ಗನೂರು ಹಾಗೂ ಮಂಚನಬೆಲೆಯ ಕೆಲಸವಾಗಬೇಕೆಂದು ಜನರು ಆಂಗಲಾಚಿ ಕೇಳಿಕೊಂಡರು. ಇವತ್ತು ಮಂಚನಬೆಲೆ ಕೆಲಸ ಪ್ರಾರಂಭವಾಗಿದೆ, ಸದ್ಯದಲ್ಲೇ ಆ ರೈತರಿಗೆ ನೀರನ್ನು ಕೊಡುವಂತಹ ಕೆಲಸ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು 25ಲಕ್ಷ ಎಕರೆಗೆ ಕಾವೇರಿಯಿಂದ ನೀರು ಕೊಡುವಂತಹ ಕೆಲಸ ಮಾಡಿದರೆ 450 ಕೋಟಿ ರೂಪಾಯಿಗಳನ್ನು ಕೊಡಬೇಕು. 300ಕೋಟಿ ರೂಪಾಯಿಗಳು ಸಾಲದು ಎನ್ನುವಂತಹ ಮಾತನ್ನು ಹೇಳುತ್ತೇನೆ ಇನ್ನು ಜಪಾನ ನೆರವಿನಿಂದ 225 ಕೋಟಿ ರೂಪಾಯಿಗಳ ರೀ-ಮಾಡಲ್ (ಆಧುನೀಕರಣ) ಮಾಡುವಂಥಾದ್ದು 50-100ವರ್ಷಗಳಿಂದ ಇರುವಂಥ ಚಾನಲ್‌ಗಳು ಇದೆ. ಅದನ್ನು ಆಧುನೀಕರಣ ಮಾಡಲು ಜಪಾನ್ ನೆರವಿನಿಂದ 250 ಕೋಟಿ ರೂಪಾಯಿಗಳ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಮಾನ್ಯ ನೀರಾವರಿ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ನಾಲ್ಕಾರು ಬಾರಿ ವಚನ ಕೊಟ್ಟಿದ್ದಾರೆ. ಅದನ್ನು ತಾವು ಮಾಡ ಬೇಕೆಂದು ಹೇಳುತ್ತೇನೆ. ಇನ್ನು ಇವತ್ತು ಎಲ್ಲೆಲ್ಲಿ ಕಮಾಂಡ್ ಏರಿಯಾ ಬರುತ್ತದೆ. ಅಲ್ಲಿ ಕೆರೆಗಳಾಗಲಿ, ಕಟ್ಟೆಗಳಾಗಲಿ, ಫಿಕಪ್‌ಗಳಾಗಲಿ, ಅದನ್ನು ನೀರಾವರಿ ಇಲಾಖೆಯವರು ತೆಗೆದುಕೊಂಡು ಈ ಅಚ್ಚುಕಟ್ಟು ಪ್ರದೇಶದಲ್ಲಿ ಯಾವ ರೀತಿ ನೀರಾವರಿ ಬರುತ್ತದೆಯೋ ಅದನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕಷ್ಟು ಟೀಚರ್ಸ್‌ಗಳನ್ನು ತೆಗೆದುಕೊಂಡಿರುವಂಥಾದ್ದು, ಮತ್ತು ಮಾನ್ಯ ಗೋವಿಂದಗೌಡರಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಪ್ಪು ಹಲಗೆ ಯೋಜನೆಯ ಅಡಿಯಲ್ಲಿ 25,000, 50,000 ರೂ.ಗಳ ವೆಚ್ಚದಲ್ಲಿ ಕಟ್ಟಡಗಳನ್ನು ಕಟ್ಟಿಸಿ ಇನ್ನೂ ಕೇವಲ 3 ವರ್ಷಗಳು ಆಗಿಲ್ಲ ಅವು ಬಿದ್ದು ಹೋಗಿದೆ. ಈ ವಿಚಾರವಾಗಿ ಮಂಡ್ಯದಲ್ಲಿ ಡಿ.ಡಿ.ಪಿ.ಐ.ನವರನ್ನು ಕೇಳಿದಾಗ ಅವರು 40,000 ರೂಪಾಯಿಗಳನ್ನು ನಾವು ಕೊಡುತ್ತೇವೆ ಮತ್ತು ಮಂಡಲ ಪಂಚಾಯತ್‌ನವರು 10,000 ರೂಪಾಯಿಗಳನ್ನು ಕೊಡಲಿ, ತಾಲ್ಲೂಕು ಪಂಚಾಯತ್‌ನವರು ಕೊಡಲಿ, 77000 ರೂ.ಗಳಿಗೆ ಕಾಂಟ್ರಿಬ್ಯೂಷನ್‌ನಿಂದ ವಸಲೂ ಮಾಡಿ ಎಂದು ಹೇಳುತ್ತಾರೆ. ನೀವು ಐದು ಸಾವಿರ ರೂಪಾಯಿಗಳ ಬಿಲ್ಡಿಂಗ್ ಕಟ್ಟುವುದು ಬೇಡ, ಹತ್ತು ಸಾವಿರ ರೂಪಾಯಿಗಳದು ಕಟ್ಟುವುದು ಬೇಡ. ಕಡಿಮೆ ಮೌಲ್ಯದ ಆರ್.ಸಿ.ಸಿ ಬಿಲ್ಡಿಂಗ್‌ಗಳನ್ನು ಕಟ್ಟುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆನ್ನುವಂಥಾದ್ದು ನಮ್ಮವಾದ. ನಾವು ಕೊಟ್ಟಿರುವಂತಹ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತಾವು ಏನು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ, ಅವೆಲ್ಲವನ್ನೂ ಕಾರ್ಯಗತ ಮಾಡಿ ಮುಂದಿನ ಸಾರಿ 34ಕ್ಕೆ ಬರುವುದು ಬೇಡ. 120 ಇರುವಂಥಾದ್ದು 170 ಆಗಲಿ ಎಂಬ ಆಶಯವನ್ನು ವ್ಯಕ್ತ ಮಾಡಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಂತಹ ನಿರ್ಣಯದ ಮೇಲೆ ಮಾತನಾಡುವಾಗ ಮೊದಲನೆಯದಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಕಾರಣ ಶಾಸಕರುಗಳಿಗೆ ಒಬ್ಬ ಪಿ.ಎ. ಮತ್ತು ಕಛೇರಿಯನ್ನು 224 ಕ್ಷೇತ್ರದ ಶಾಸಕರುಗಳಿಗೆ ಕೊಟ್ಟು ಅವರು ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದಕ್ಕಾಗಿ ಹೆಚ್ಚು ಶ್ರಮಿಸಿದಂಥ ನಮ್ಮ ಅಧ್ಯಕ್ಷರು, ಹಾಗೂ ಇನ್ನು ಅನೇಕರಿಗೆ ಈ ಸಮಯದಲ್ಲಿ ಅವರನ್ನು ನೆನಸಿಕೊಳ್ಳುತ್ತೇವೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಮೊದಲನೆಯದಾಗಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದು, ಇವತ್ತು ದೇವೇಗೌಡರು ದೇಶದ ಪ್ರಧಾನಮಂತ್ರಿಗಳಾಗಿರುವುದು ಹೆಮ್ಮೆಯ ವಿಷಯ ಎನ್ನುವುದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಕೇಂದ್ರದಲ್ಲಿ ಒಬ್ಬ ಕರ್ನಾಟಕದ ವ್ಯಕ್ತಿ ಪ್ರಧಾನಮಂತ್ರಿಗಳಾಗಿ ಬಂದಿರುವುದು ಯಾವ ಕಾಲದಲ್ಲಿ ಸಾಧ್ಯವಿಲ್ಲದಂಥ ಒಂದು ಪರಿಸ್ಥಿತಿ ಇತ್ತು. ಒಂದು ಕಾಲದಲ್ಲಿ ನಾವು ತೆಂಕುತೇಯುತ್ತಿದೆ. ಬಡಗು ಬೆಳೆಯುತ್ತಿದೆ ಎಂದು ವಾದವನ್ನು ಮಾಡಿ ಅದಕ್ಕೆ ತಕ್ಕಂತೆ ಅಂಕಿಅಂಶಗಳನ್ನು ಪ್ರತಿಪಾದನೆ ಮಾಡಿ ಪ್ರತ್ಯೇಕ ದ್ರಾವಿಡ ನಾಡನ್ನು ಕೇಳುತ್ತಿದ್ದ ನಮಗೆ ಇವತ್ತು ಆ ಪರಿಸ್ಥಿತಿ ಬದಲಾವಣೆಗೆ ಕರ್ನಾಟಕದವರು ಒಬ್ಬರು ಪ್ರಧಾನಮಂತ್ರಿಗಳಾಗಿ ಇವತ್ತು ಕೆಲಸವನ್ನು ಮಾಡುವ ಸಂದರ್ಭದಲ್ಲಿ ನಿಜವಾಗಿಯೂ ನಾವು ಸಂತೋಷ ಪಡುವಂಥ ವಿಚಾರ. ಅವರು ಯಾವ ಪಕ್ಷದವರು ಎನ್ನುವುದು ಮುಖ್ಯವಲ್ಲ, ಯಾರೋ ಗುಜರಾತ್ ರಾಜ್ಯಕ್ಕೆ ಸೇರಿದವರು, ಉತ್ತರ ಪ್ರದೇಶಕ್ಕೆ ಸೇರಿದವರು ಮಾತ್ರ ಈ ದೇಶದ ಪ್ರಧಾನಮಂತ್ರಿಗಳಾಗಿ ಬರುವ ಕಾಲವಿತ್ತು, ಆ ಕಾಲ ಇವತ್ತು ಬದಲಾವಣೆಯಾಗಿದೆ. ಮೊನ್ನೆಯ ದಿವಸ ಲೋಕಸಭೆಯಲ್ಲಿ ಪ್ರಧಾನ ಮಂತ್ರಿಗಳು ಪ್ರಸ್ತಾಪ ಮಾಡಿರುವುದು ಏನೆಂದರೆ ಈ ದೇಶದ ಮೂವತ್ತೆರಡು ಕೋಟಿ ಜನರಿಗೆ ರಿಯಾಯಿತಿ ದರದಲ್ಲಿ ದವಸಧಾನ್ಯಗಳನ್ನು ಕೊಡುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ, ಅದಕ್ಕೆ ಎಂಟು ಸಾವಿರ ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಒದಗಿಸುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ, ಇದು ನಿಜವಾಗಿಯೂ ಹೆಮ್ಮೆಪಡುವಂಥ ವಿಚಾರ, ಇದನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಯಿತು, ಈ ದೇಶದ ಪ್ರಜೆ ಎಲ್ಲೇ ಇದ್ದರೂ ಕೂಡ ಸಂತೋಷಪಡುವ ವಿಚಾರವೆಂದು ಹೇಳಿದ್ದಾರೆ. ಖಂಡಿತವಾಗಿಯೂ ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಂತೋಷದ ವಿಚಾರ, ಎಲ್ಲೆ ಭಾರತೀಯರಿದ್ದರೂ ಕೂಡ ಅವರು ಹೆಮ್ಮೆ ಪಡುವ ವಿಚಾರವಾದರೂ ಕೂಡ ಈ ಸ್ವತಂತ್ರ ಭಾರತದಲ್ಲಿ ಇವತ್ತು ದೇಶ ಬಂಧನದಿಂದ ಬಿಡುಗಡೆಯಾಗುವ ಮುನ್ನ, ಇವತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಕಾಲನ್ನು ಇರಿಸಿ ಮತ್ತೊಂದು ಕಾಲನ್ನು ಕರ್ನಾಟಕದ ಏಕೀಕರಣದಲ್ಲಿ ಹೋರಾಟ ಮಾಡಿದಂಥ ನಾಯಕರನ್ನು, ಅವರ ತ್ಯಾಗ ಬಲಿದಾನಗಳನ್ನು ಇವತ್ತು ನಾವು ನೆನಸುವಾಗ, ಉದಯವಾಗಲಿ ಚೆಲುವ ಕನ್ನಡ ನಾಡು ಎಂದು ಹಾಡನ್ನು ಬರೆದು ಹುಯಿಲುಗೋಳು ನಾರಾಯಣರಾಯರು ಇವತ್ತು ನಮ್ಮಿಂದ ಇಲ್ಲದೇ ಇರಬಹುದು. ಆದರೆ ಅವರು ಯಾವ ಕನಸ್ಸನ್ನು ಕಂಡು ಈ ಭಾಷಾವಾರು ರಾಜ್ಯಗಳು ರಚನೆಯಾಗಬೇಕು ಎನ್ನುವ ಕಲ್ಪನೆಯಲ್ಲಿ ಈ ಕರ್ನಾಟಕದ ಏಕೀಕರಣಕ್ಕಾಗಿ ದುಡಿದು ಮಡಿದಂಥ ಮಹಾನ್ ನಾಯಕರುಗಳ ಉದ್ದೇಶ ಏನಿತ್ತೆಂದರೆ, ಈ

ರಾಜ್ಯದಲ್ಲಿ ಎಲ್ಲಾ ಹಂತದಲ್ಲೂ ಕನ್ನಡ ಆಡಳಿತ ಭಾಷೆಯಾಗಬೇಕು, ಕನ್ನಡ ಎಲ್ಲಾ ಹಂತದಲ್ಲೂ ಆಡಳಿತ ಭಾಷೆಯಾಗಿ, ಇಲ್ಲಿ ಕನ್ನಡದಲ್ಲೇ ಕುಗ್ರಾಮದಿಂದ ಹಿಡಿದು ವಿಧಾನಸೌಧದವರೆಗೆ ಆಡಳಿತ ಭಾಷೆಯಾಗುತ್ತದೆ ಎಂಬ ಕನಸ್ಸನ್ನು ಏನು ಕಂಡಿದ್ದರೋ ಆ ಕನಸು ನಲವತ್ತೊಂದು ವರ್ಷಗಳಾಯಿತು, ವಿಜಯನಗರದ ಸಾಮ್ರಾಜ್ಯದಲ್ಲಿ ರಕ್ಕಸತಂಗಡಿಯ ಯುದ್ಧದಲ್ಲಿ ಅಳಿಯ ರಾಮರಾಯರು ಮರಣಹೊಂದಿದ ನಂತರ, ದಿಕ್ಕಪಾಲಾಗಿ ಚೆದುರಿದ ಸಹೋದರರು ಮತ್ತ 1956ರ ನವೆಂಬರ್ ಒಂದರಂದು ಒಂದುಗೂಡಿದೆವು; ಇವತ್ತು ಕನ್ನಡ ನಾಡಿನ ಹಲವಾರು ಪ್ರದೇಶಗಳು, ಆಂಧ್ರಪ್ರದೇಶದಿಂದ, ತಮಿಳುನಾಡಿನಿಂದ, ಕೇರಳದಿಂದ ಬರಬೇಕಾಗಿದ್ದರೂ ಕೂಡ ಬಂದಂಥ ಪ್ರದೇಶಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಬೇಕು, ಈ ನಾಡಿಗೆ ಕನ್ನಡ ಆಡಳಿತ ಭಾಷೆಯಾಗಬೇಕು ಎನ್ನುವ ಕನಸ್ಸನ್ನು ಕಂಡರೊ, ಆ ಕನಸು ಇವತ್ತು ನನಸಾಗಿಸಲು ಸಾಧ್ಯವಾಗಿಲ್ಲ. ಕಾರಣ ಏನೆಂದು ಕೇಳುವಾಗ ನಮ್ಮಲ್ಲಿ ರಾಜಕಾರಣಿಗಳಾಗಿರಬಹುದು ಅಥವಾ ಯಾವುದೇ ಪಕ್ಷದ ಶಾಸಕರಾಗಿರ ಬಹುದು, ಮಂತ್ರಿಗಳಾಗಿರ ಬಹುದು, ನಾವು ಬಹುಪಾಲು ಕನ್ನಡದಲ್ಲಿ ವ್ಯವಹಾರವನ್ನು ಮಾಡಿದರು ಕೂಡ ಸರ್ಕಾರದ ಮಟ್ಟದಲ್ಲಿ, ವಿಧಾನಸೌಧದಲ್ಲೇ ಇವತ್ತು ಆಡಳಿತ ಭಾಷೆಯಾಗಿ ಕನ್ನಡ ಜಾರಿಗೆ ಬಂದಿಲ್ಲ. ಏನು ಐಎಎಸ್, ಐಪಿಎಸ್ ಉನ್ನತ ಅಧಿಕಾರಿಗಳಿದ್ದಾರೆ, ಅವರು ಕನ್ನಡ ಭಾಷೆಯನ್ನು ಎಲ್ಲಾ ಹಂತದಲ್ಲೂ ಇವತ್ತು ಜಾರಿಗೆತರಲು ತಯಾರಾಗಿಲ್ಲದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಭಾಷಾವಾರು ಪ್ರಾಂತಗಳು ರಚನೆಯಾಗಿದ್ದು ಅರ್ಥವಿಲ್ಲದ ಒಂದು ಮಾತಾಗುತ್ತದೆ. ಎಲ್ಲಾ ಹಂತದಲ್ಲೂ ತೀವ್ರವಾಗಿ ಕನ್ನಡ, ಆಡಳಿತ ಭಾಷೆಯಾಗಿ ಬರದೇ ಹೋದರೆ ಈ ಭಾಷಾವಾರು ಪ್ರಾಂತ್ಯ ರಚನೆಯಾಗಿರುವುದು ಅರ್ಥವಿಲ್ಲದ ಒಂದು ಮಾತಾಗುತ್ತದೆ. ಈ ಹಂತದಲ್ಲಿ ರಾಜ್ಯ ಸರ್ಕಾರ ಕನ್ನಡ ಭಾಷೆಯನ್ನು ಹೆಚ್ಚು ಹೆಚ್ಚು ಬಳಸಿ, ಎಲ್ಲಾ ಹಂತದಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ತಂದು ಅದಕ್ಕೆ ವಿರುದ್ಧವಾಗಿರುವ ಅಧಿಕಾರಿಗಳನ್ನು ಕನ್ನಡವನ್ನು ಕಲಿಯದೇ ಹೋದರೆ ಅವರನ್ನು ಮನೆಗೆ ಕಳುಹಿಸುವ ಕೆಲಸವನ್ನು ಮಾಡಿದರೆ ಮಾತ್ರ ಕಡ್ಡಾಯವಾಗಿ ಎಲ್ಲಾ ಹಂತದಲ್ಲೂ ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಅಚಲವಾಗಿ ನಂಬಿದ್ದೇನೆ. ಇವತ್ತು ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಮಾಡಿದ್ದರೂ ಕೂಡ, ನಾವು ಈ ತಿಂಗಳ ಹನ್ನೊಂದನೇ ತಾರೀಖಿನಿಂದ ಈ ಸಭೆಯಲ್ಲಿ ಪಾಲ್ಗೊಳ್ಳುವ ಸಂದರ್ಭದಲ್ಲಿ ಇದಕ್ಕಿಂತ ಮುಂಚೆ ಆಡಳಿತವನ್ನು ನಡೆಸಿದ ಗೆಳೆಯರು ನಮ್ಮ ಸರ್ಕಾರದಲ್ಲಿ ಈ ರೀತಿ ಇತ್ತು, ನಾವು ಈ ಸಾಧನೆಯನ್ನು ಮಾಡಿದ್ದೇವೆ ಎಂದು ವಾದವನ್ನು ಪ್ರತಿಪಾದನೆ ಮಾಡುತ್ತಾರೆ, ಇವತ್ತು ಅಧಿಕಾರ ಪೀಠದಲ್ಲಿರುವವರು ನೀವು ಮಾಡಿರುವ ಇಂತಿಂಥ ಲೋಪಗಳನ್ನು ಸರಿಪಡಿಸುತ್ತಿದ್ದೇವೆ ಎಂದು ವಾದವನ್ನು ಹೇಳುವ ಸಂದರ್ಭದಲ್ಲಿ ಈ ಸ್ವತಂತ್ರ್ಯ ಭಾರತದ ಐವತ್ತು ವರ್ಷಗಳಲ್ಲಿ, ಇವತ್ತು ಎಷ್ಟೋ ಕೋಟ್ಯಾಂತರ ಜನರಿಗೆ ವಾಸ ಮಾಡಲು ಮನೆಯಿಲ್ಲದೆ, ಹಾಕಿಕೊಳ್ಳಲು ಮನೆಯಿಲ್ಲದೆ, ಪ್ರತಿಯೊಬ್ಬರ ಕೈಗೆ ಕೆಲಸಬೇಕೆಂದರೂ ಕೂಡ, ಯಾವ ಸರ್ಕಾರ ಕೂಡ ಇವತ್ತು ಕೆಲಸ ಕೊಡುವುದಕ್ಕೆ ಯಾವುದೇ ಸರ್ಕಾರಕ್ಕೆ ಸಾಧ್ಯವಾಗದಿರುವ ಪರಿಸ್ಥಿತಿಯಲ್ಲಿ ಜೀವನ ಮಾಡುವ ದಿನಗಳಲ್ಲಿ ನಾನು ತಮ್ಮ ಗಮನಕ್ಕೆ ತರುತ್ತೇನೆ, ಸರ್ಕಾರದ ಗಮನಕ್ಕೆ ತರುತ್ತೇನೆ, ಇವತ್ತು ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ ಈ ಸಂದರ್ಭದಲ್ಲಿ ಇವತ್ತು ಬೇಕಾದಷ್ಟು ಜನ ಈ

ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರು ಮಹಾನಗರದಲ್ಲಿ ಲಕ್ಷಾಂತರ ಜನ ಒಂದು ಹೊತ್ತಿಗೂ ಊಟಕ್ಕಿಲ್ಲದೆ ಇರುವವರನ್ನು ನಾವು ನೋಡುತ್ತಿದ್ದೇವೆ. ಈ ಪರಿಸ್ಥಿತಿಯನ್ನು ಬದಲಾವಣೆ ಮಾಡಲು ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದರೂ ಕೂಡ, ಇವತ್ತು ವಯಸ್ಸಾದವರಿಗೆ ವೃದ್ಧಾಪ್ಯವೇತನ, ಮತ್ತು ಅಂಗವಿಕಲರಿಗೆ ಹಾಗೂ ವಿಧವೆಯರಿಗೆ ಸರ್ಕಾರ ರೂ. 75 ಗಳನ್ನು ಕೊಡುವ ಯೋಜನೆ ಜಾರಿಯಲ್ಲಿದೆ. ಆದರೆ, ನಾನು ಕಳೆದ ಸಾರಿ ಆಯವ್ಯಯದ ಮೇಲೆ ಮಾತನಾಡುವಾಗ ಹೇಳಿದ್ದೇನೆಂದರೆ, ಆ ಎಪ್ಪತ್ತೈದು ರೂಪಾಯಿಗಳೂ ಕೂಡ ಆ ಕಡುಬಡವರಿಗೆ ತಲುಪುತ್ತಿಲ್ಲ, ಅದು ಮಧ್ಯದಲ್ಲಿ ಎಲ್ಲೋ ಹೋಗಿ ಪೋಸ್ಟ್‌ಮ್ಯಾನ್ ಮುಂತಾದವರು ಅದನ್ನು ತಪ್ಪಾದ ದಾರಿಯಲ್ಲಿ ಉಪಯೋಗಿಸುತ್ತಿದ್ದಾರೆ, ಅವರಿಗೆ ಅದನ್ನು ಬ್ಯಾಂಕಿನ ಮುಖಾಂತರ ವಿತರಣೆ ಮಾಡುವ ಯೋಜನೆಯನ್ನು ಜಾರಿಗೆತರಬೇಕೆಂದು ಹೇಳಿದಾಗ, ಅದಕ್ಕೆ ಅರ್ಥ ಸಚಿವರು ಹಳ್ಳಿಗಳಲ್ಲಿ, ಗ್ರಾಮಗಳಲ್ಲಿ ಬ್ಯಾಂಕ್‌ಗಳಲ್ಲಿ ಕಷ್ಟವೆಂದು ಹೇಳಿದರು, ಬ್ಯಾಂಕ್‌ಗಳು ಇರುವ ಪಟ್ಟಣಗಳಲ್ಲಾದರೂ ಕೂಡ ತಾವು ಅದನ್ನು ಜಾರಿಗೆ ತರಬೇಕು, ಕೊಡುವ ಆ ಎಪ್ಪತ್ತೈದು ರೂಪಾಯಿಗಳು ಯಾವುದಕ್ಕೂ ಉಪಯೋಗವಾಗುವುದಿಲ್ಲ, ಇವತ್ತು ಸಾಧಾರಣವಾಗಿ ಒಂದು ಗ್ರಾಮದಲ್ಲಿ ಹೋಗಿ ಒಂದು ಟೀ ಕುಡಿದರೂ ಅದರ ಬೆಲೆ ಎರಡು ರೂಪಾಯಿಗಳಿಗಿಂತ ಕಡಿಮೆ ಇರುವುದಿಲ್ಲ, ಒಂದು ದಿವಸಕ್ಕೆ ಎರಡು ರೂಪಾಯಿಯಂತೆ ಒಂದು ತಿಂಗಳಿಗೆ ಅರವತ್ತು ರೂಪಾಯಿಗಳಾಗುತ್ತದೆ. ಆದಕಾರಣ ಆ ಎಪ್ಪತ್ತೈದು ರೂಪಾಯಿಗಳು ಕೊಡುವುದರ ಬದಲು ಇನ್ನೂರು ರೂಪಾಯಿಗೆ ಹೆಚ್ಚಿಸಿದರೆ ಮಾತ್ರ ಆ ಕಡುಬಡವರಿಗೆ, ವಯಸ್ಸಾದವರಿಗೆ ಉಪಯೋಗವಾಗುತ್ತದೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನ. ರಾಜ್ಯಪಾಲರ ಭಾಷಣದಲ್ಲಿ ಬೆಂಗಳೂರು ನಗರದಲ್ಲಿರುವವರ ಬಗ್ಗೆ ಇವತ್ತು ಯಾವುದೇ ಪ್ರಸ್ತಾಪ ವಿಲ್ಲದಿರುವುದನ್ನು ನೋಡುತ್ತಿದ್ದೇವೆ. ಇವತ್ತು ಹೊರಗಡೆಯಿಂದ ಬಂದು ವಾಸ ಮಾಡುವವರು ಬೆಂಗಳೂರು ನಗರದಲ್ಲಿ ಒಂದು ಕೋಟಿಗೂ ಹೆಚ್ಚು ಜನರು ಇದ್ದು, ನಾನು ತಾಳ್ಮೆಯಿಂದ ಸರ್ಕಾರದ ಗಮನಕ್ಕೆ ತರುತ್ತೇನೆ, ಇಲ್ಲಿರುವ ಸಭಾಧ್ಯಕ್ಷರು, ಮುಖ್ಯಮಂತ್ರಿಗಳು, ಬೆಂಗಳೂರು ನಗರದ ಪೋಲಿಸ್‌ಕಮಿಷನರ್‌ವರು, ಕಾರ್ಪೊರೇಷನ್ ಮೇಯರ್‌ರವರು, ಕಮಿಷನರ್‌ವರು ಹಾಗೂ ಮಂತ್ರಿಗಳು, ತಾವು ಮಂತ್ರಿಗಳಿನ್ನುವುದನ್ನು ಬಿಟ್ಟು ಸಂಜೆ ಹೊತ್ತು ಬೆಂಗಳೂರು ನಗರದಲ್ಲಿ ನಡೆದು ಓಡಾದಿದರೆ ಬೆಂಗಳೂರು ನಗರದ ಪರಿಸ್ಥಿತಿ ಅರ್ಥವಾಗುತ್ತದೆ. ಎಲ್ಲ ಓಡಾಡಲು ಜನಸಂದಣಿ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಸಾಧ್ಯವಾಗದಂಥ ಪರಿಸ್ಥಿತಿ ಇವತ್ತು ಬೆಂಗಳೂರು ನಗರದಲ್ಲಿದೆ. ತಾವು ಹೋಗುವಾಗ ಹೈಕೋರ್ಟಿನ ನ್ಯಾಯಾಧೀಶರನ್ನೂ ಕೂಡ ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗುತ್ತದೆ, ಕಾರಣ ಇವತ್ತು ಯಾರಾದರೂ ಫುಟಪಾತನಲ್ಲಿ ವ್ಯಾಪಾರ ಮಾಡುವವರು ಯಾವುದೇ ನ್ಯಾಯಾಲಯಕ್ಕೆ ಹೋದರೆ ನ್ಯಾಯಾಲಯ ತಡೆಯಾಜ್ಞೆಯನ್ನು ಕೊಡುತ್ತದೆ. ಇವತ್ತು ಬೆಂಗಳೂರು ನಗರದಲ್ಲಿ ಓಡಾಡಲು ಆಗದಂಥ ಪರಿಸ್ಥಿತಿ ಇದೆ, ಈ ಪರಿಸ್ಥಿತಿಯನ್ನು ಇವತ್ತು ಬದಲಾವಣೆ ಮಾಡಬೇಕಾಗಿದೆ. ಇವತ್ತು ತಾವು ಸಂಜೆಯ ಸಮಯದಲ್ಲಿ ಕೆಂಪೇಗೌಡ ರಸ್ತೆಯಲ್ಲಿ ಹೋದರೆ, ಅಲ್ಲಿ ಲಕ್ಷಾಂತರ ಜನ ಓಡಾಡುವ ಆಗದಂಥ ಪರಿಸ್ಥಿತಿ, ಹೊರ ರಾಜ್ಯದಿಂದ, ಹಳ್ಳಿಗಾಡಿನಿಂದ ಬಂದಿರತಕ್ಕಂಥ ಎಷ್ಟೋ ರೈತರುಗಳು, ಅವರು ತಮ್ಮ ಜೇಬಿನಲ್ಲಿ ಆಸ್ಪತ್ರೆಗೆ ಹಣವನ್ನು ತರುತ್ತಾರೆ, ಹಣ ಪಿಕ್‌ಪ್ಯಾಕೇಟ್ ಆಗಿ ಊಟಕ್ಕೂ ಇಲ್ಲದಂತೆ ನರಳುವ ಜನರನ್ನು ನಾವು ನೋಡುತ್ತೇವೆ, ಈ ಪರಿಸ್ಥಿತಿಯನ್ನು ಇವತ್ತು ಬದಲಾವಣೆ